# “ಸರ್ವಮೂಲ ಪ್ರವೇಶಿಕಾ”

## ಶ್ರೀಮಧ್ವಾಚಾರ್ಯರ

## 37 ಸರ್ವಮೂಲ ಗ್ರಂಥಗಳ

## ಸಂಕ್ಷಿಪ್ತಪರಿಚಯ

ಲೇಖನ –

ಮಧ್ವಶಾಸ್ತ್ರಸಂಪನ್ನ ಶ್ರೀ ಜಿ.ಹೆಚ್.ದ್ವಾರಕಾನಾಥಾಚಾರ್ಯರು

# “ಸರ್ವಮೂಲ ಪ್ರವೇಶಿಕಾ”

## ರಚನೆ – ಮ|ಶಾ।ಸಂ।ದ್ವಾರಕಾನಾಥಾಚಾರ್ಯರು

**ಕೃಷ್ಣಂ ವಿದ್ಯಾಪತಿಂ ನತ್ವಾ ಪೂರ್ಣಬೋಧಾರ್ಯಸದ್ಗುರೂನ್ ।**
**ಗ್ರಂಥಾನ್ವಕ್ಷ್ಯೇನಂದತೀರ್ಥ–ಮುಖಾಂಬುಜವಿನಿಸ್ಸೃತಾನ್ ॥**

## ಗೀತಾಭಾಷ್ಯಂ

**೧. ಗೀತಾಭಾಷ್ಯಂ ಚಕಾರಾದೌ ಪ್ರಥಮಂ ತುಷ್ಟಿದಂ ಹರೇ: ॥**

ಶ್ರೀಕೃಷ್ಣಪರಮಾತ್ಮನು ಯುದ್ಧರಂಗದಲ್ಲಿ ವಿಷಾದಯುಕ್ತನಾದ ಅರ್ಜುನನನ್ನು ಉಪಲಕ್ಷಣದಿಂದ ಸಂಸಾರದಲ್ಲಿ ಬಹುದು:ಖಗ್ರಸ್ತರಾದ ಸಜ್ಜನರನ್ನು ಉದ್ದೇಶಿಸಿ ಹದಿನೆಂಟು ಅಧ್ಯಾಯಗಳಿಂದ ಕೂಡಿದ 701 ಶ್ಲೋಕಗಳಿಂದ ಸಹಿತವಾದ **“ಭಗವದ್ಗೀತೆ”**ಯನ್ನು ಉಪದೇಶಿಸಿದನು.

**ಮೊದಲನೇ ಅಧ್ಯಾಯ** – ಅರ್ಜುನನು ಬಂಧುಗಳ ದರ್ಶನದಿಂದ ವಿಷಾದಗ್ರಸ್ತನಾಗಿ ಯುದ್ಧದಲ್ಲಿ ತನ್ನ ಅಸ್ತ್ರಗಳನ್ನು ತ್ಯಜಿಸಲು, ಶ್ರೀಕೃಷ್ಣನು ಸಾಧಾರಣವಾದಂತಹ ರೀತಿಯಲ್ಲಿ ಇದು ಆಯುಕ್ತವೆಂದು ನಿರೂಪಿಸಿದರೂ ಸಂತೃಪ್ತನಾಗದ ಕೌಂತೇಯನು ಪುನ: ಪ್ರಶ್ನಿಸುತ್ತಾನೆ.

**ದ್ವಿತೀಯಾಧ್ಯಾಯದಲ್ಲಿ**– ಭಗವಂತನ ಸ್ವರೂಪ, ಜೀವರುಗಳ ನಿತ್ಯತ್ವ, ಸುಖದು:ಖಗಳ ಆಗಮಾ–ಪಾಯಿತ್ವ, ನಿಷ್ಕಾಮಕರ್ಮಯೋಗವನ್ನು ನಿರೂಪಿಸಿದನು.

**ಮೂರನೇಯದರಲ್ಲಿ** – ಜ್ಞಾನಕ್ಕೆ ಸಾಧನವಾದ ಕರ್ಮವನ್ನು ನಿರೂಪಿಸುವ ವ್ಯಾಜದಿಂದ ಅಕರ್ಮವನ್ನು ನಿಂದಿಸಿ, ಮನಸ್ಸಿಗೆ ಬಂಧಮೋಕ್ಷ ಸಾಧನತ್ವವನ್ನೂ, ಕಾಮಕ್ಕೆ ಜ್ಞಾನಪ್ರತಿಬಂಧಕತ್ವ ಹಾಗೂ ಉತ್ಪನ್ನವಾದ ಜ್ಞಾನದ ತಿರೋಧಾನಕ್ಕೆ ಕಾರಣತ್ವವನ್ನೂ ತೃತೀಯಾದಲ್ಲಿ ತಿಳಿಸಿದನು.

**ನಾಲ್ಕನೆಯದರಲ್ಲಿ** – ನಿವೃತ್ತ ಧರ್ಮಾನುಷ್ಠಾನಕ್ಕೆ ಕಾರಣವಾದ ಸದಾಚಾರ, ಅವತಾರಗಳ ಪ್ರಾದುರ್ಭಾವಕ್ಕೆ ಸೇವೆಯೇ ಕಾರಣ, ಕಾಮತ್ಯಾಗಗಳನ್ನು ತೋರಿಸಿದನು.

**ಪಂಚಮಾಧ್ಯಾಯದಲ್ಲಿ** – ಕರ್ಮಯೋಗ ಸ್ವರೂಪವನ್ನು, ಸಂನ್ಯಾಸ ಶಬ್ದಾರ್ಥ, ಅಪರೋಕ್ಷಜ್ಞಾನಕ್ಕೆ ಪೂರ್ವಭಾವಿಯಾದ, ಸಾಧನ, ಜ್ಞಾನಿಲಕ್ಷಣವನ್ನು ಅಳವಡಿಸಲಾಗಿದೆ.

**ಆರನೇಯದರಲ್ಲಿ** – ಜ್ಞಾನಕ್ಕೆ ಅಂತರಂಗಸಾಧನವಾದ ಸಮಾಧಿಯೋಗವನ್ನು ಮನೋನಿಗ್ರಹ ಯತ್ನ ಸಾಧ್ಯವೆಂಬ ವಿಷಯವನ್ನು ತಿಳಿಸಿದ್ದಾನೆ.

ಈ ರೀತಿ ಮೊದಲಿನ ಆರು ಅಧ್ಯಾಯಗಳಲ್ಲಿ ಜ್ಞಾನಸಾಧನವನ್ನು ನಿರೂಪಿಸಿ, ಮುಂದಿನ ಷಟ್ಕದಲ್ಲಿ ಭಗವಂತನ ಮಹಾತ್ಮೆಯನ್ನು ನಿರೂಪಿಸಿದ್ದಾರೆ.

**ಸಪ್ತಮದಲ್ಲಿ** – ಜಗತ್ತಿನ ಸೃಷ್ಟ್ಯಾದಿಗಳು, ಭಗವದಧೀನತ್ವ, ಬೇರೆ ದೇವತೆಗಳ ಉಪಾಸನೆಯ ಫಲವನ್ನು ನಿರೂಪಿಸಿರುವನು.

**ಎಂಟನೇ ಅಧ್ಯಾಯದಲ್ಲಿ** – ಮರಣಕಾಲದಲ್ಲಿ ಸ್ಮರಿಸಬೇಕಾದ ಮಾರ್ಗ, ಗಮ್ಯಗಳನ್ನು, ಭಕ್ತಿಗೆ ಶ್ರೇಷ್ಟಸಾಧನತ್ವವನ್ನು ನಾನಾ ಯೋಗಿಗಳ ಮರಣೋತ್ತರದಲ್ಲಿ ಮಾರ್ಗಭೇದವನ್ನು ನಿರೂಪಿಸಲಾಗಿದೆ.

**ಒಂಭತ್ತನೇಯದರಲ್ಲಿ** – ತನಗೆ ಕರ್ಮಬಂಧರಾಹಿತ್ಯವನ್ನು, ಭಗವಂತನ ತಿರಸ್ಕಾರವು ಅನರ್ಥಕಾರಣತ್ವ, ಉತ್ತಮರಾದ ಭಗವದ್ಭಕ್ತರನ್ನು ದ್ವೇಷಿಸಬಾರದೆಂದು ತಿಳಿಸಿದ್ದಾನೆ.

**ದಶಮದಲ್ಲಿ** – ಭಗವಂತನಿಗೆ ಉತ್ಪತ್ತಿರಾಹಿತ್ಯ, ಸರ್ವಕಾರಣಾತ್ವ, ವಿಭೂತಿಗಳ ನಿರೂಪಣೆ, ವಿಭೂತಿ ಲಕ್ಷಣಗಳನ್ನು ಉಪದೇಶ ಮಾಡಿದ್ದಾನೆ.

**ಏಕಾದಶದಲ್ಲಿ** – ಅಣುತ್ವ, ವಿಭುತ್ವಗಳ ವಿರೋಧ ಪರಿಹಾರ, ಭಗವಂತನಿಗೆ ವೃದ್ಧ್ಯಾದಿ ವಿಕಾರಗಳಿಲ್ಲವೆಂದು ನಿರೂಪಿಸಿದ್ದಾರೆ.

**ದ್ವಾದಶದಲ್ಲಿ** – ಅವ್ಯಕ್ತೋಪಾಸನೆ, ಕ್ಲೇಶದಿಂದ ಮೋಕ್ಷಸಾಧನತ್ವ, ಭಗವದ್ಭಕ್ತರಿಗೆ ಶ್ರೇಷ್ಠತ್ವ ಸಾಕಾರೋಪಾಸನೆ ಮೋಕ್ಷಸಾಧನತ್ವ, ಭಗವಂತನಿಗೆ ಪ್ರೀತಿಕರವಾದಂತಹ ಕರ್ಮಗಳನ್ನು ತಿಳಿಸಲಾಗಿದೆ.

ಈ ಮುಂದಿನ ಆರು ಅಧ್ಯಾಯಗಳಲ್ಲಿ ಹಿಂದೆ ನಿರೂಪಿಸಿದ ವಿಷಯಗಳನ್ನು ಸಂಕಲನ ಮಾಡಿ, ನಿರೂಪಿಸುತ್ತಾರೆ.

**ಹದಿಮೂರರಲ್ಲಿ** – ಕ್ಷೇತ್ರಾದಿಗಳ ಸ್ವರೂಪವನ್ನು ನಿರೂಪಿಸಿ, ಜಗತ್ತಿನ ಮಿಥ್ಯಾತ್ವವನ್ನು ನಿರಾಕರಿಸಿದ್ದಾರೆ.

**ಹದಿನಾಲ್ಕರಲ್ಲಿ** – ಬಂಧನ ಪ್ರಕಾರ, ರಜೋಗುಣದ ಫಲ, ಗುಣಗಳಿಗೆ ಸ್ವಾತಂತ್ರ್ಯ ನಿಷೇಧಗಳನ್ನು ತಿಳಿಸಿದ್ದಾರೆ.

**ಹದಿನೈದರಲ್ಲಿ** – ಜಗದ್ವೃಕ್ಷದ ಸ್ವರೂಪದ, ಅದರ ಛೇದನದ ಕ್ರಮ, ಕ್ಷರಾಕ್ಷರ ಪದಾರ್ಥಗಳ ಸ್ವರೂಪವು ನಿರೂಪಿತವಾಗಿದೆ.

**ಹದಿನಾರರಲ್ಲಿ** – ಅಸುರರ ಸ್ವರೂಪ, ಕಾಮಕ್ಕೆ ಪ್ರವೃತ್ತಿಕಾರಣತ್ವದ ವಿಚಾರಗಳನ್ನು ತಿಳಿಸಿದ್ದಾರೆ.

**ಹದಿನೇಳರಲ್ಲಿ**– ಶಾಸ್ತ್ರವಿಧಿಯನ್ನು ಅತಿಕ್ರಮಿಸಿದರೆ ಇಹ–ಪರ ಎರಡರಲ್ಲೂ ದು:ಖವನ್ನು, ಶ್ರದ್ಧಾ ತ್ರೈವಿಧ್ಯವನ್ನು, ಯಜ್ಞಾದಿಗಳಿಗೆ ಕರ್ತವ್ಯತ್ವವನ್ನು ತಿಳಿಸಿದ್ದಾರೆ.

**ಹದಿನೆಂಟರಲ್ಲಿ** – ಸತ್ಯಾಸತ್ಯಗಳಿಗೆ ಭೇದವನ್ನು, ಸನ್ಯಾಸಿಗಳಿಗೆ ಯಜ್ಞಾದಿಗಳ ಕರ್ತವ್ಯತ್ವವನ್ನು ಅಪರೋಕ್ಷ ಜ್ಞಾನದ ಉಪಾಯವನ್ನು, ಸರ್ವಧರ್ಮಪರಿತ್ಯಾಗ ಅಸಾಧ್ಯವೆಂದು ನಿರೂಪಿಸಿ ಉಪಸಂಹರಿಸಿದ್ದಾನೆ. ಈ ರೀತಿ ಭಗವದ್ಗೀತೆಯು ಭೇದವನ್ನೇ ನಿರೂಪಿಸುತ್ತದೆ ಎಂದು ಶ್ರೀಮದಾನಂದತೀರ್ಥ ಭಗವತ್ಪಾದರು ಸಾರಿ ತೋರಿಸಿದ್ದಾರೆ.

## ೨. ಭಾಷ್ಯ –

**ಅದು:ಖವ್ ಇತರತ್ಸರ್ವಂ ಜೀವಾ ಏವತು ದು:ಖಿನ: ।**
**ತೇಷಾಂ ದು:ಖ ಪ್ರಹಾಣಾಯಾ ಶ್ರುತಿರೇಷಾ ಪ್ರವರ್ತತೇ ॥**

- ಜೀವರುಗಳಿಗೆ ಬಂದಿರುವ ಸಂಸ್ಕಾರ ದು:ಖವನ್ನು ನಿವಾರಿಸಲು ವೇದಗಳು ಪ್ರವೃತ್ತವಾಗಿವೆ. ಅವುಗಳ ಅರ್ಥಜ್ಞಾನಕ್ಕೆ ಸಾಧನವಾಗಿ ಬ್ರಹ್ಮಸೂತ್ರಗಳು ಹೊರಟಿದ್ದಾವೆ. ಈ 564 ಬ್ರಹ್ಮಸೂತ್ರಗಳ ಅರ್ಥವಿವರಣೆ ರೂಪವಾದ ಕೃತಿಯೇ "ಭಾಷ್ಯ" ಗ್ರಂಥ. ನಾಲ್ಕು ಅಧ್ಯಾಯ, ಹದಿನಾರು ಪಾದಗಳಿಂದ ಯುಕ್ತವಾದ ಈ ಗ್ರಂಥದಲ್ಲಿ ಶ್ರೀಮದಾಚಾರ್ಯರು ಪ್ರತಿಯೊಂದು ಸೂತ್ರಕ್ಕೂ ತಮ್ಮ ಅಮೋಘವಾದ ಶೈಲಿಯಿಂದ, ಗಂಭೀರವಾಗಿ ಅತ್ಯಲ್ಪ ಶಬ್ದಗಳಿಂದ, ವಿವರಣೆ ನೀಡಿದ್ದಾರೆ. ಶ್ರೀಮದಾಚಾರ್ಯರ ಪ್ರಕಾರ 564 ಸೂತ್ರಗಳು, 222 ಅಧಿಕರಣಗಳಿವೆ. ಬೇರೆ ಆಚಾರ್ಯರುಗಳ ಮತಗಳಲ್ಲಿ ಸೂತ್ರಸಂಖ್ಯಾ ಹಾಗೂ ಅಧಿಕರಣ ಸಂಖ್ಯಾಗಳಲ್ಲಿ ವ್ಯತ್ಯಾಸಗಳು ಇದ್ದಾವೆ.

- **ಪ್ರಥಮಾಧ್ಯಾಯದ ಪ್ರಥಮಪಾದದಲ್ಲಿ 31ಸೂತ್ರಗಳು, 12 ಅಧಿಕರಣಗಳಿದ್ದಾವೆ.**
  - ಮೊದಲಿನ 5 ಅಧಿಕರಣಗಳಲ್ಲಿ ಸಕಲ ಶಾಸ್ತ್ರಾರ್ಥವು ವರ್ಣಿತವಾಗಿದೆ.
  - **ಮೊದಲಿನ** ಸೂತ್ರದಲ್ಲಿ ಬ್ರಹ್ಮನಾದ ವಿಷ್ಣುವಿಗೆ ಗುಣಪೂರ್ಣತ್ವವನ್ನು
  - **ಎರಡನೆಯದರಲ್ಲಿ** ಜಗಜ್ಜನ್ಮಾದಿಕಾರಣತ್ವರೂಪವಾದ, ಸಂಭಾವಿಕ ಯುಕ್ತಿಯನ್ನು
  - **ಮೂರನೇದರಲ್ಲಿ** ಲಕ್ಷಣಕ್ಕೆ ಬರತಕ್ಕ ಅತಿವ್ಯಾಪ್ತಿದೋಷನಿರಾಸಪೂರಕವಾಗಿ ಪ್ರಮಾಣದ ಉಪನ್ಯಾಸವು.
  - **ನಾಲ್ಕನೇಯದರಲ್ಲಿ** ಉಪಕ್ರಮಾತಿ ತಾತ್ಪ್ರರ್ಯಲಿಂಗಗಳಿಂದ ಸಕಲಾಗಮಗಳಿಂದ ಪರಮ ಮುಖ್ಯವೃತ್ತಿಯಿಂದ ಪ್ರತಿಪಾದ್ಯನು ಎಂದು ಹಾಗೂ
  - **ಐದನೇ** ಸೂತ್ರದಲ್ಲಿ ಬ್ರಹ್ಮನಿಗೆ ವಾಚ್ಯತ್ವವನ್ನು ನಿರೂಪಿಸಿದ್ದಾರೆ.
  - ಶಬ್ದಗಳು ಅನ್ಯತ್ರಪ್ರಸಿದ್ಧ, ಉಭಯತ್ರ ಪ್ರಸಿದ್ಧ, ಅನ್ಯತ್ರೈವ ಪ್ರಸಿದ್ಧ ಎಂದು ಮೂರು ಪ್ರಕಾರಗಳಿವೆ. ಅವುಗಳು ಪ್ರತ್ಯೇಕವಾಗಿ ನಾಮತ್ಮಕವೆಂದು ಮತ್ತು ಲಿಂಗಾತ್ಮಕವೆಂದು ಎರಡು ಪ್ರಕಾರಗಳಿವೆ.

- **ಪ್ರಥಮ ಪಾದದಲ್ಲಿ** – ಅನ್ಯತ್ರ ಪ್ರಸಿದ್ಧವಾದ ನಾಮಾತ್ಮಕ ಶಬ್ದಗಳನ್ನು ವಿಷ್ಣುವಿನಲ್ಲಿ ಸಮನ್ವಯ ಮಾಡಿದ್ದಾರೆ. ಸಕಲರಿಂದಲೂ ಅಪೇಕ್ಷಿತವಾದ ಗುಣ–ಆನಂದ. ಅದು ಸ್ವಾಮಿಯಲ್ಲಿಲ್ಲದಿದ್ದರೆ, ಅವನ ಉಪಾಸನಾ ಪೂಜಾದಿಗಳು ಕೂಡುವುದಿಲ್ಲವೆಂದು, ಮೊದಲು ಆನಂದಮಯ ಶಬ್ದವನ್ನು, ನಂತರದಲ್ಲಿ ಆಕಾಶ, ಪ್ರಾಣಾದಿ ಶಬ್ದಗಳನ್ನು ಸಮನ್ವಯ ಮಾಡಿದ್ದಾರೆ.
- **ಎರಡನೆಯ ಪಾದದಲ್ಲಿ** – ಲಿಂಗಾತ್ಮ (ಧರ್ಮಗಳನ್ನು ತಿಳಿಸಿದ) ಶಬ್ದಗಳಾದ ಸರ್ವತ್ರ ಪ್ರಸಿದ್ಧತ್ವ, ಅಂತರ್ಯಾಮಿತ್ವ, ಇತ್ಯಾದಿ 7 ಅಧಿಕರಣ ಹಾಗೂ 32 ಸೂತ್ರಗಳಿಂದ ನಿರೂಪಿಸಿದ್ದಾರೆ.
- **ಮೂರನೇ ಪಾದದಲ್ಲಿ** –ಉಭಯತ್ರ ಪ್ರಸಿದ್ಧವಾದ ನಾಮ ಹಾಗೂ ಲಿಂಗಾತ್ಮಕವಾದ ಶಬ್ದಗಳನ್ನು 14 ಅಧಿಕರಣಗಳು ಹಾಗೂ 43 ಸೂತ್ರಗಳಿಂದ ನಿರೂಪಿಸಿದ್ದಾರೆ.
- **ನಾಲ್ಕನೇ ಪಾದದಲ್ಲಿ**– 6 ಅಧಿಕರಣಗಳು ಹಾಗೂ 29 ಸೂತ್ರಗಳಿಂದ ಅನ್ಯತ್ರೈವ ಪ್ರಸಿದ್ಧವಾದ ನಾಮಲಿಂಗಾತ್ಮಕವಾದ ಅವ್ಯಕ್ತ, ದು:ಖಿ, ಜ್ಯೋತಿ, ಪ್ರಕೃತಿ ಮೊದಲಾದ ಶಬ್ದಗಳನ್ನು ಸಮನ್ವಯ ಮಾಡಿ ಗುಣಪರಿಪೂರ್ಣಾತ್ವವನ್ನು ತಿಳಿಸಿದ್ದಾರೆ.

- **ಎರಡನೆಯ ಅಧ್ಯಾಯವು ಗುಣಪೂರ್ಣತ್ವಕ್ಕೆ ವಿರುದ್ಧವಾದ ಯುಕ್ತಿಗಳನ್ನು ನಿರಾಕರಿಸಿ ಸ್ವಾಮಿಯ ನಿರ್ದೋಷತ್ವವನ್ನು ಸಮರ್ಥಿಸುತ್ತದೆ.**

- **೧ನೇ ಪಾದದಲ್ಲಿ** – 38 ಸೂತ್ರಗಳಿಂದ ಹಾಗೂ 11 ಅಧಿಕರಣಗಳಿಂದ ಯುಕ್ತ್ಯಾಭಾಸಗಳಿಂದ ಬರುವ ವಿರೋಧವನ್ನು ಪರಿಹರಿಸುತ್ತಾ, ವೇದಗಳಿಗೆ ಸ್ವತ: ಪ್ರಾಮಾಣ್ಯ, ಅಪಾದಿ ಶಬ್ದಗಳು ದೇವತಾವಾಚಕ, ಜೀವರುಗಳಿಗೆ ಸ್ವತಂತ್ರ್ಯಾಭಾವ, ಪರಮಾತ್ಮನಿಗೆ ಅಚಿಂತ್ಯ ಶಕ್ತಿತ್ವವನ್ನು ನಿರೂಪಿಸಿದ್ದಾರೆ.

- **೨ನೇ ಪಾದದಲ್ಲಿ** – 12 ಅಧಿಕರಣಗಳು ಹಾಗೂ 45 ಸೂತ್ರಗಳಿದ್ದು ಸಾಂಖ್ಯ, ಚಾರ್ವಾಕ, ನೈಯಾಯಿಕ, ಬೌದ್ಧ, ಜೈನ, ಪಾಶುಪತಾದಿ ಮತಗಳನ್ನು ನಿರಾಕರಿಸಿ, ಸ್ವಾಮಿಯ ಜಗತ್ಕಾರಣತ್ವವನ್ನು ಸಮರ್ಥಿಸಿದ್ದಾರೆ.

- **೩ನೇ ಪಾದದಲ್ಲಿ**– 53 ಸೂತ್ರಗಳು 19 ಅಧಿಕರಣಗಳಿವೆ. ಅಲ್ಲಿ ಆಕಾಶ, ವಾಯುಗಳಿಗೆ ಉತ್ಪತ್ತಿಯನ್ನು, ಸ್ವಯಂ ಬ್ರಹ್ಮನಿಗೆ ಅನುತ್ಪತ್ತಿಯನ್ನು, ಜೀವನಿಗೆ ಉತ್ಪತ್ತಿ, ಪರಿಮಾಣ, ಕರ್ತೃತ್ವ, ಅಂಶಾಂಶಿ ಸ್ವರೂಪದ ವಿಚಾರವನ್ನು, ದ್ವಾರಶ್ರುತಿಗಳಿಗೆ ಯಾವ ಕ್ರಮದಲ್ಲಿ ಅರ್ಥೈಸಬೇಕೆಂದು ತಿಳಿಸಿದ್ದಾರೆ.

- **೪ನೇ ಪಾದದಲ್ಲಿ** – 13 ಅಧಿಕರಣಗಳೂ, 23 ಸೂತ್ರಗಳೂ ಇದ್ದು, ಇಲ್ಲಿ ಇಂದ್ರಿಯಗಳು, ಮುಖ್ಯಪ್ರಾಣದೇವರು, ಜ್ಯೋತಿ, ಇಂದ್ರಿಯಗಳಿಗೆ ಕಾರಣತ್ವ, ನಾಮಾದಿ ಪ್ರಪಂಚದ ಸೃಷ್ಠಿ, ಇತ್ಯಾದಿ ವಿಷಯಗಳಲ್ಲಿ ಜನ್ಮಾಜನ್ಮ, ಸಂಖ್ಯಾ, ಪರಿಮಾಣಾದಿಗಳನ್ನು ಅಧಿಕರಿಸಿದ ಶ್ರುತಿಗಳ ವಿರೋಧವನ್ನು ಪರಿಹರಿಸಿದ್ದಾರೆ. ಹೀಗೆ ಶ್ರೀಹರಿಗೆ ನಿರ್ದೋಷತ್ವವನ್ನು ದ್ವಿತೀಯಾಧ್ಯಾಯದಲ್ಲಿ ನಿರೂಪಿಸಿದ್ದಾರೆ.

- ಹೀಗೆ ಬ್ರಹ್ಮನ ಸ್ವರೂಪವನ್ನು ನಿರ್ಧರಿಸಿದ ಮೇಲೆ, ಇಂತಹ ಬ್ರಹ್ಮನ ಪ್ರಾಪ್ತಿಯ ವಿಚಾರವು ಪ್ರಸಕ್ತವಾಯಿತು. **“ಅಥಾತೋ ಬ್ರಹ್ಮಜಿಜ್ಞಾಸಾ”** ಎಂಭ ಪ್ರಥಮ ಸೂತ್ರದಲ್ಲಿ **“ಅಥ”** ಶಬ್ದದಿಂದ ನಿರೂಪಿತವಾದ ಅಧಿಕಾರಿಗಳಿಂದ ಮಾಡಬೇಕಾದಂತಹ ಸಾಧನೆಯನ್ನು ಇಲ್ಲಿ ನಿರೂಪಿಸಿದ್ದಾರೆ.

- **ಮೊದಲನೆಯ ಪಾದದಲ್ಲಿ** –20 ಅಧಿಕರಣಗಳು ಹಾಗೂ 29 ಸೂತ್ರಗಳಿಂದ ಸಾಧನೆಗಳಲ್ಲಿ ಮೊದಲಾದಂತಹ ವೈರಾಗ್ಯವನ್ನು ನಿರೂಪಿಸಲಿಕ್ಕೆ ಜೀವನು ಈ ದೇಹವನ್ನು ಪರಿತ್ಯಾಗ ಮಾಡಿದ ಮೇಲೆ ಗಮನಾಗಮನ ಸ್ವರೂಪ, ಸ್ವರ್ಗ–ನರಕಗಳ ವಿಚಾರ, ಗರ್ಭವಾಸಾದಿಗಳ ಕಾಲದಲ್ಲಿ ಅನುಭವಿಸತಕ್ಕ ದು:ಖಸ್ವರೂಪವನ್ನು ವರ್ಣಿಸಿದ್ದಾರೆ. ಈ ಎಲ್ಲಾ ಅವಸ್ಥೆಗಳಲ್ಲಿ ಬಹು ದು:ಖವಾಗುವುದರಿಂದ ಈ ಸಂಸ್ಕಾರದಲ್ಲಿ ವಿರಕ್ತನಾಗಿ ಪರಮಾತ್ಮನಲ್ಲಿ ಭಕ್ತಿಯುಳ್ಳವನಾಗಬೇಕು.

- **೨ನೇ ಪಾದದಲ್ಲಿ** –

ವಿರಕ್ತನಾದವನು ಸ್ವಾಮಿಯಲ್ಲಿ ಭಕ್ತಿ ಮಾಡಬೇಕು. ಅದಕ್ಕೋಸ್ಕರವಾಗಿ ಶ್ರೀಹರಿಯ ಮಹಿಮೆಗಳನ್ನು ವಿವರಿಸಲು 20 ಅಧಿಕರಣಗಳನ್ನು ಹಾಗೂ 42 ಸೂತ್ರಗಳನ್ನು ಅಳವಡಿಸಿದ್ದಾರೆ. ಜಾಗ್ರತ, ಸ್ವಪ್ನ, ಸುಷುಪ್ತಿ, ಮೋಹಾವಸ್ಥೆಗಳಲ್ಲಿ ಶ್ರೀಹರಿಯೇ ಸಕಲ ಜೀವರುಗಳಿಗೆ ಪ್ರೇರಕನು. ಆಯಾ ಅವಸ್ಥಾಗಳಲ್ಲಿ ಜೀವನಿಗೆ ಸುಖದು:ಖಗಳನ್ನು ಕೊಟ್ಟರೂ ತಾನು ನಿಯಾಮಕನಾದ್ದರಿಂದ ದು:ಖರಹಿತನೂ, ಅನೇಕ ರೂಪಗಳಿಂದ ನಾನಾ ರೀತಿಯ ವ್ಯಾಪಾರಗಳನ್ನು ಮಾಡಿದರೂ ಶ್ರೀಹರಿಯು ಒಬ್ಬನೇ ಎಂದೂ, ಅಪ್ರಾಕೃತಸ್ವರೂಪನೂ, ಜ್ಞಾನಾನಂದಾದಿ ಸ್ವರೂಪನೂ, ನಿತ್ಯಾವ್ಯಕ್ತನಾದರೂ ಸ್ತತ ಭಕ್ತಿಪೂರ್ವಕ ಶ್ರವಣ ಮನನಗಳಿಂದ ಗಮ್ಯನೂ, ಜೀವನು ಈಶ್ವರನ ಪ್ರತಿಬಿಂಬನು, ಪುಂಸ್ತ್ವದಂತೆ ಶ್ರೀಹರಿಯು ಜೀವರುಗಳಿಗೆ ಅವರವರ ಯೋಗ್ಯತಾಕ್ಕೆ ಅನುಸರಿಸಿ ಜ್ಞಾನಾನಂದಾದಿಗಳ ಅಭಿವ್ಯಂಜಕನೂ, ಸರ್ವಕರ್ಮಫಲದಾತನು, ಇತ್ಯಾದಿ ಮಹಾಮಹಿಮೆಗಳನ್ನು ನಿರೂಪಿಸಿದ್ದಾರೆ.

- **೩ನೇ ಪಾದದಲ್ಲಿ** 42 ಅಧಿಕರಣಗಳೂ, 68 ಸೂತ್ರಗಳೂ ಇವೆ. ಶ್ರೀ ಹರಿಯ ಅಪರೋಕ್ಷಜ್ಞಾನಕ್ಕೆ ಸಾಧನವಾದ ಉಪಾಸನೆಯನ್ನು ನಿರೂಪಣೆ ಮಾಡಿದ್ದಾರೆ. ಸಮಸ್ತ ಶಾಸ್ತ್ರಾಧ್ಯಯನರೂಪವಾದ ಉಪಾಸನೆಯನ್ನು ಮೊದಲು ನಿರೂಪಿಸಿ, ಬ್ರಹ್ಮಾದಿಗಳು ಉತ್ತಮರು, ಸರ್ವಗುಣೋಪಸಂಹಾರದಲ್ಲಿ ಶಕ್ತರು, ಬಹುಗುಣೋಪಸಂಹಾರಿಗಳು, ಮಧ್ಯಮರು. ಚತುರ್ಗುಣೋಪಸಂಹಾರ ಮಾಡುವ ಶಕ್ತರು ಮನುಷ್ಯರೆಂದು ತಿಳಿಸಿರುವರು. ಆನಂದ, ಜ್ಞಾನ, ನಿರ್ದೋಷತ್ವ, ಆತ್ಮತ್ವವೆಂಬ ಚತುರ್ಗುಣಗಳು ಸರ್ವ ಮುಮುಕ್ಷುಗಳಿಂದಲೂ ಉಪಾಸ್ಯವೆಂದು ತಿಳಿಸಿರುವರು. ಮೋಕ್ಷದಲ್ಲಿ ತಾರತಮ್ಯವಿದ್ದರೂ ಬ್ರಹ್ಮಜ್ಞಾನಿಗಳಾದ್ದರಿಂದ ಅಲ್ಲಿ ದ್ವೇಷಾದಿಗಳಿರುವುದಿಲ್ಲ. ಮುಕ್ತರುಗಳಿಗೆ ಉಪಾಸನಾ ನಿಯಮವಿಲ್ಲದಿದ್ದರೂ ವಿಧಿಬಂಧಗಳ ಭಯವಿಲ್ಲದಿದ್ದರೂ, ಸ್ವೇಚ್ಛೆಯಿಂದ ಪೂಜಿಸುತ್ತಾರೆ

- **೪ನೇ ಪಾದದಲ್ಲಿ – 11** ಅಧಿಕರಣಗಳೂ, **51** ಸೂತ್ರಗಳೂ ಇವೆ. ಇಲ್ಲಿ ಅಪರೋಕ್ಷ ಜ್ಞಾನದ ಮಹಿಮೆಯನ್ನು ನಿರೂಪಿಸಿದ್ದಾರೆ. ಅಪರೋಕ್ಷ ಜ್ಞಾನವು ಮೋಕ್ಷವೆಂಬ ಫಲವನ್ನೂ, ಇತರೆ ಫಲಗಳನ್ನೂ ಸಾಕ್ಷಾತ್ತಾಗಿ ಕೊಡುತ್ತದೆ ಎಂಬುದು ಬಾದರಾಯಣರ ಮತ. ಜೈಮಿನ್ಯಾಚಾರ್ಯರು ಜ್ಞಾನವು ಕರ್ಮಕ್ಕೆ ಶೇಷವಾದ್ದರಿಂದ ಇತರ ಫಲಗಳನ್ನು ಸ್ವತಂತ್ರವಾಗಿ ಕೊಡುವುದಿಲ್ಲವೆಂದು ನಿರೂಪಿಸಿದ್ದಾರೆ. ಈ ಜ್ಞಾನಕ್ಕೆ ಸರ್ವರೂ ಅಧಿಕಾರಿಗಳಲ್ಲ. ಕೇವಲ ವೈಷ್ಣವರು ವಿಷ್ಣುಭಕ್ತಿ ಪೂರ್ವಕವಾಗಿ ವೇದಾದಿಗಳ ಅಧ್ಯಯನವನ್ನು ಮಾಡಿರುವವರೇ ಅಧಿಕಾರಿಗಳು. ಜ್ಞಾನ ಪ್ರಾಪ್ತವಾದ ಮೇಲೆ ಆ ಜ್ಞಾನಿಗಳ ಪ್ರವೃತ್ತಿಯ ಬಗ್ಗೆಯೂ ವಿಸ್ತಾರವಾಗಿ ವಿಮರ್ಶೆ ಮಾಡಿದ್ದಾರೆ. ಸ್ವಭಾವ ಬದಲಾವಣೆ ಸಾಧ್ಯವಿಲ್ಲ. ಜ್ಞಾನ, ಭಕ್ತಿ, ಹರಿಗುರುಗಳ ಅನುಗ್ರಹ ವಿನಾ ಬೇರೆ ಯಾವ ಫಲವನ್ನೂ ಅಪೇಕ್ಷಿಸಬಾರದು. ಇಂತಹ ಜ್ಞಾನ ಫಲ ಬಹುಭಾಗ ನಿಯಾಮಕರಾದಂತಹ ದೇವತೆಗಳಿಗೆ, ಅಲ್ಪಭಾಗ ಸಾಧಕರಾದ ಜೀವರಿಗೆ ಆಗುತ್ತದೆ. ಈ ಜ್ಞಾನವನ್ನು ಗೋಪ್ಯವಾಗಿ ಉಪದೇಶಿಸಬೇಕೆಂದು ನಿರೂಪಿಸಿದ್ದಾರೆ.

- ನಾಲ್ಕನೇ ಅಧ್ಯಾಯವು ಫಲಾಧ್ಯಾಯವು.

- **ಪ್ರಥಮ ಪಾದದಲ್ಲಿ – 8** ಅಧಿಕರಣಗಳೂ, **19** ಸೂತ್ರಗಳೂ ಇವೆ. ಇಲ್ಲಿ ಕರ್ಮಕ್ಷಯವಾಗುವ ಕ್ರಮ ತಿಳಿಸಿವೆ. ಮೊದಲಿನ ಕೆಲವು ಸೂತ್ರಗಳು ಅವಶ್ಯಕವಾಗಿ ಮಾಡಲೇಬೇಕಾದ ಸಾಧನೆಗಳನ್ನು ನಿರೂಪಿಸಿದೆ. ಶ್ರವಣಾದಿಗಳ ಅಭ್ಯಾಸವು ಬೇಕು. ಶ್ರೀಹರಿ ಎಲ್ಲರಿಗೂ ನಿಯಾಮಕನಾಗಿದ್ದಾನೆಂಬ ಉಪಾಸನೆಯು ಅವಶ್ಯವೆಂದೂ, ಆಸನಾದಿಗಳು ಅವಶ್ಯಕವೆಂದೂ ಹಾಗೂ ಬ್ರಹ್ಮಜ್ಞಾನಿಗೆ ಕರ್ಮಗಳು ಕ್ಷಯವಾಗುವ ಕ್ರಮವನ್ನೂ ನಿರೂಪಿಸಿದ್ದಾರೆ.

- **೨ನೇ ಪಾದದಲ್ಲಿ** ಕರ್ಮಕ್ಷಯವಾದ ಮೇಲೆ ಉತ್ಕ್ರಾಂತಿಯು ನಿರೂಪಿತವಾಗಿದೆ. ಇಲ್ಲಿ **10** ಅಧಿಕರಣಗಳೂ, **22** ಸೂತ್ರಗಳೂ ಇವೆ. ವಾಗಭಿಮಾನಿ ಉಮಾ, ಮನೋಭಿಮಾನಿಯಾದ ಗರುಡ, ಶೇಷರಲ್ಲಿ ಇದೇ ರೀತಿಯಾಗಿ ಇಂದ್ರಿಯ ನಿಯಾಮಕರಾದ ದೇವತೆಗಳು, ತಮಗೆ ನಿಯಾಮಕರಾದಂತಹ ದೇವತೆಗಳಲ್ಲಿ ಲಯ ಹೊಂದುತ್ತಾರೆ. ಆ ಗರುಡ-ಶೇಷರು ಮುಖ್ಯಪ್ರಾಣರಲ್ಲಿ, ಆ ಪ್ರಾಣರು ಸ್ವಾಮಿಯಲ್ಲಿ ಲಯ ಹೊಂದುವರು. ನಿತ್ಯಮುಕ್ತಳಾದ ರಮಾದೇವಿಯರಿಗೆ ಎಲ್ಲೂ ಲಯವಿಲ್ಲ. ಆದರೆ ಜೀವರುಗಳು ರಮಾದೇವಿಯಲ್ಲಿ ಲಯ ಹೊಂದಿದರೆ, ಪುನ: ಸಂಸ್ಕಾರಕ್ಕೆ ಬರುತ್ತಾರೆ.

ಮನಷ್ಯೋತ್ತಮರು ಕರ್ಮಕ್ಷಯವನ್ನು ಹೊಂದಿದ ಮೇಲೆ ಸುಷುಮ್ನಾನಾಡಿಯಿಂದ ಹೊರಟು ಶ್ರೀ ಹರಿಯ ಅನುಗ್ರಹದಿಂದ ಮಾರ್ಗದ ಸ್ಮರಣೆ ಮಾಡಿಕೊಂಡು ಉತ್ಕ್ರಾಂತರಾಗುತ್ತಾರೆ.

- **೩ನೇ ಪಾದದಲ್ಲಿ 6** ಅಧಿಕರಣಗಳು **16** ಸೂತ್ರಗಳೂ ಇವೆ. ಇಲ್ಲಿ ಉತ್ಕ್ರಾಂತರಾದವರಿಗೆ ಬ್ರಹ್ಮಪರ್ಯಂತವಾಗಿ ಮಾರ್ಗವು ನಿರೂಪಿತವಾಗಿದೆ. ಅರ್ಚಿಲೋಕ, ಅತ್ವಾಹಿಕಲೋಕ, ಅಹರ್ಲೋಕ, ಪಕ್ಷಾಭಿಮಾನಿಲೋಕ, ಮಾಸಾಭಿಮಾನಿಲೋಕ, ಅಯನಾಭಿಮಾನಿಲೋಕ, ಸಂವತ್ಸರಾಭಿಮಾನಿಲೋಕ, ಸೋಮಲೋಕ, ವೈಶ್ವಾನರಲೋಕ, ಇಂದ್ರಲೋಕ, ಧ್ರುವಲೋಕ, ಭಾರತೀಲೋಕ, ತಟಿತ್‌ಲೋಕ, ವರುಣಲೋಕ, ಪ್ರಜಾಪತಿಲೋಕ, ಸೂರ್ಯಲೋಕ, ಪ್ರಾಣಲೋಕ ಮತ್ತು ಪರಮಾತ್ಮಲೋಕಗಳನ್ನು ಕ್ರಮವಾಗಿ ಹೊಂದುತ್ತಾರೆ. ಪ್ರತೀಕಾಲಂಬನರು ಚತುರ್ಮುಖ ಬ್ರಹ್ಮನನ್ನು ಹೊಂದುತ್ತಾರೆಂದು ಶ್ರುತಿಗಳ ವಿರೋಧವನ್ನು ಪರಿಹರಿಸಿದ್ದಾರೆ.

- ಬಾದರಾಯಣರು ನಾಲ್ಕನೇ ಪಾದದಲ್ಲಿ ಮುಕ್ತರುಗಳಿಗೆ ಮೋಕ್ಷದಲ್ಲಿ ಭೋಗವನ್ನು ನಿರೂಪಿಸಿದ್ದಾರೆ. ಇಲ್ಲಿ **11** ಅಧಿಕರಣಗಳು, **23** ಸೂತ್ರಗಳು ಇವೆ. ಜ್ಞಾನಿಯು ಪರಮಾತ್ಮನನ್ನು ಹೊಂದಿ ತನ್ನ ಸ್ವರುಪದ ಆವಿಷ್ಕಾರವನ್ನು ಹೊಂದಿ ಪರಮಾತ್ಮನನ್ನು ಅತಿಕ್ರಮಿಸದೆ ಅವರವರ ಯೋಗ್ಯತೆಗೆ ಅನುಸಾರವಾಗಿ ಸಮಸ್ತಕಾಮಗಳನ್ನು ಭೋಗಿಸುತ್ತಾನೆ. ಮುಕ್ತರಿಗೆ ಬಾಹ್ಯದೇಹವಿಲ್ಲದಿದ್ದರೂ ಸಹ ಶ್ರೀಹರಿಯ ದೇಹದಿಂದ ಭೋಗಿಸುತ್ತಾರೆಂದು ಜೈಮಿನಿಯ ಮತ. ಚಿನ್ಮಾತ್ರದೇಹದಿಂದ ಎಂದು ಔಡುಲೋಮಿಯರ ಮತ. ಈ ಎರಡೂ ಮತಗಳ ವಿರೋಧವನ್ನು ಪರಿಹರಿಸುವರು ಶ್ರೀ ಬಾದರಾಯಣರು. ಸಂಕಲ್ಪದಿಂದಲೇ ಎಲ್ಲಾ ಪ್ರಾಪ್ತವಾಗುತ್ತದೆ. ಮುಕ್ತರಿಗೆ ಜಗತ್ಕಾರಣತ್ವಾದಿಗಳು ಇರಲು ಸಾಧ್ಯವಿಲ್ಲ. ಮುಕ್ತನು ಮತ್ತೆ ಸಂಸ್ಕಾರಕೂಪದಲ್ಲಿ ಯಾವಾಗಲೂ ಬರಲು ಸಾಧ್ಯವಿಲ್ಲವೆಂದು ನಿರೂಪಿಸಿದ್ದಾರೆ.

## ೩. **ಅಣುಭಾಷ್ಯೇ ಚಕ್ರೇಥ** –

ಸರ್ವಶಾಸ್ತ್ರಾರ್ಥ ಸಂಗ್ರಹರೂಪವಾದ ಈ ಗ್ರಂಥವು ಬ್ರಹ್ಮಸೂತ್ರ ಭಾಷ್ಯಗ್ರಂಥದ ಸಾರರೂಪವಾಗಿದೆ. ಶ್ರೀಮಧ್ವರು ಪ್ರತಿಯೊಂದು ಪಾದಕ್ಕೆ ಎರಡು ಶ್ಲೋಕಗಳಂತೆ ಮೂವತ್ತೆರಡು ಶ್ಲೋಕಗಳಿಂದ ಈ ಗ್ರಂಥದಲ್ಲಿ ಪ್ರತಿಯೊಂದು ಅಧಿಕರಣಗಳಿಂದ ಪ್ರತಿಪಾದಿತವಾದ ವಿಷಯವನ್ನು ನಿರೂಪಿಸಿದ್ದಾರೆ.

**'ಅನಂತಾರ್ಥ ಪ್ರಕಟಿತ: ತ್ವಯಾಣೌ ಭಾಷ್ಯಸಂಗ್ರಹೇ"** ಎಂದು ಗೀತವಾದ ಈ ಗ್ರಂಥ. ಸಂಕ್ಷೇಪವಾಗಿ ವಿಷಯಗಳನ್ನು ನಿರೂಪಿಸುವ ಕ್ರಮಗಳನ್ನು ತಿಳಿಸಲು ಮಾರ್ಗದರ್ಶಿಯಾಗಿದೆ.

೪. **ಹ್ಯನುವ್ಯಾಖ್ಯಾನಮುತ್ತಮಮ್** – ಪದ್ಯರೂಪವಾದ ಬ್ರಹ್ಮಸೂತ್ರಭಾಷ್ಯಕ್ಕೆ ವ್ಯಾಖ್ಯಾನರೂಪವಾದ ಅತಿಮೇರುಕೃತಿ **"ಅನುವ್ಯಾಖ್ಯಾನ".** ಇಲ್ಲಿ ಶ್ರೀ ಮಧ್ವರು ಪರವಾದಿಗಳನ್ನು ಯುಕ್ತ್ಯಾದಿ ಪ್ರಮಾಣಪೂರ್ವಕವಾಗಿ ನಿರಾಕರಿಸಿದ್ದಾರೆ. ಪ್ರಥಮವಾದ **ಜಿಜ್ಞಾಸಾಧಿಕರಣದಲ್ಲಿ "ಅತ:"** ಎಂಬ ಸೂತ್ರದ ಶಬ್ದಕ್ಕೆ ಐದು ರೀತಿಯಲ್ಲಿ ವ್ಯಾಖ್ಯಾನ ಮಾಡುತ್ತಾ ಇತರರ ಅಭಿಪ್ರಾಯಗಳನ್ನು – ಪ್ರಾಯಶ: ಅದ್ವೈತಿಗಳನ್ನು ನಿರಾಕರಿಸಿರುವರು.

**"ಓಂಕಾರ"**ಕ್ಕೆ ಸೂತ್ರಾವಯವತ್ವವನ್ನು ಸಮರ್ಥಿಸಿದ್ದಾರೆ. **ಜನ್ಮಾಧಿಕರಣಾದಲ್ಲಿ** ಜಗಜ್ಜನ್ಮಾದಿಕಾರಣತ್ವವು ಸ್ವರೂಪಭೂತಲಕ್ಷಣಾವೆಂದು ನಿರೂಪಿಸಿ, ತಟಸ್ಥಲಕ್ಷಣಾವಾದವನ್ನು ನಿರಾಕರಿಸಿದ್ದಾರೆ. ಬಹುಶ: ಪರಭಾಷ್ಯಕಾರರು ಸ್ವೀಕರಿಸಿರುವ ಸೂತ್ರಕ್ಕೆ ಸಂಬಂಧಪಟ್ಟ ವಿಷಯವಾಕ್ಯಗಳನ್ನು ತಿರಸ್ಕರಿಸಿ, ಯೋಗ್ಯವಾದ ವಿಷಯವಾಕ್ಯಗಳನ್ನು ತಿಳಿಸುತ್ತಾ, ಪರಭಾಷ್ಯಕಾರರ ಅಜ್ಞಾನವನ್ನು ತಿಳಿಸಿದ್ದಾರೆ.

**ಜ್ಯೋತಿರುಪಾಧಿಕರಣದಲ್ಲಿ** ಸೂತ್ರದ ಪಾಠವನ್ನು ಸಹ ವ್ಯವಸ್ಥೆ ಮಾಡಿದ್ದಾರೆ ಮತ್ತು ಇದೇ ಅಧಿಕರಣದಲ್ಲಿ ನಮ: ಸ್ವಾಹಾ ಇತ್ಯಾದಿ ಕರ್ಮಕಾಂಡದಲ್ಲಿ ಬಹಳವಿರುವ ಶಬ್ದಗಳ ವ್ಯುತ್ಪತ್ತಿಯನ್ನು ತಿಳಿಸಿ, ಶ್ರೀಹರಿಯಲ್ಲಿ ಸಮನ್ವಯ ಮಾಡಿದ್ದಾರೆ.

**ದ್ವಿತೀಯಾಧ್ಯಾದದಲ್ಲಿ** ವಿರೋಧಗಳ ಪ್ರಕಾರಗಳನ್ನು ನಿರೂಪಿಸಿ, ಮೊದಲನೆಯ ಪಾದದಲ್ಲಿ ವೇದಗಳಿಗೆ ಪ್ರಾಮಾಣ್ಯವನ್ನು ನಿರೂಪಿಸುವ ವ್ಯಾಜದಿಂದ, ಪ್ರಮಾಣಗಳ ಸ್ವರೂಪ, ಸಂಖ್ಯಾದಿಗಳನ್ನು ತಿಳಿಸಿರುವರು. ದ್ವಿತೀಯ ಪಾದದಲ್ಲಿ ಸಾಂಖ್ಯಾದಿ ಮತಗಳನ್ನು ನಿರಾಕರಿಸುತ್ತಾ, ಅವರುಗಳ ಅಭಿಪ್ರಾಯವನ್ನು ಸವಿಸ್ತಾರವಾಗಿ ಅನುವಾದಿಸಿ, ತಿರಸ್ಕರಿಸುವರು. ಅದರಲ್ಲೂ ನೈಯಾಯಿಕರ ಮತವನ್ನು ಬಹಳ ಯುಕ್ತಿಪೂರ್ವಕವಾಗಿ ವಿಮರ್ಶಿಸಿರುವರು. ಶೃತಿ ಮತ್ತು ಯುಕ್ತಿಸಹಿತ ಶೃತಿಗಳ ವಿರೋಧವನ್ನು ಪರಿಹರಿಸುವ ರೀತಿಯನ್ನು ತಿಳಿಸಿದ್ದಾರೆ.

**ತೃತೀಯಾಧ್ಯಾಯದಲ್ಲಿ** ಸ್ವಪ್ನಕರ್ತೃತ್ವ ಪ್ರಸಕ್ತವಾದಾಗ ಅದ್ವೈತಿಗಳಿಂದ ನಿರೂಪಿತವಾದ ಸ್ವಪ್ನಮಿಥ್ಯಾತ್ವ ವಾದಗಳನ್ನು ನಿರಾಕರಿಸಿ ಸ್ವಪ್ನಪದಾರ್ಥಗಳಿಗೆ ಸತ್ಯತ್ವವನ್ನು ಸ್ಥಾಪಿಸಿದ್ದಾರೆ. ಇಲ್ಲಿ

ನಿರ್ಗುಣತ್ವವಾದವನ್ನು ತಿರಸ್ಕರಿಸಿ ಗುಣಪೂರ್ಣತ್ವವನ್ನು ಶ್ರೀಹರಿಗೆ ಸಮರ್ಥಿಸಿದ್ದಾರೆ. ಭಕ್ತಿ ತಾರತಮ್ಯ ನಿಮಿತ್ತಕವಾಗಿ ಫಲತಾರತಮ್ಯವನ್ನು ನಿರೂಪಿಸಿ, ಮೋಕ್ಷದಲ್ಲಿ ಈರ್ಷ್ಯದ್ವೇಷಾದಿಗಳನ್ನು ನಿರಾಕರಿಸಿದ್ದಾರೆ. ಜ್ಞಾನಿಗಳ ಪ್ರವೃತ್ತಿಯನ್ನು ತಿಳಿಸಿ, ಯೋಗ್ಯರಿಗೆ ಮಾತ್ರ ಉಪದೇಶಿಸಬೇಕು. ಅನ್ಯಥಾ ವಿರೋಧಿ ಜನರಿಗೆ ವಿಪರೀತ ಜ್ಞಾನವಾದಂತೆ ಅಯೋಗ್ಯರಿಗೆ ಎಂದೂ ಜ್ಞಾನಪ್ರಾಪ್ತಿ ಸಾಧ್ಯವಿಲ್ಲವೆಂದು ತಿಳಿಸಿದ್ದಾರೆ.

**ಚತುರ್ಥಾಧ್ಯಾಯದಲ್ಲಿ** ಆತ್ಮಾಭಿಕರಣದಲ್ಲಿ **"ಅಹಂ ಬ್ರಹ್ಮಾಸ್ಮಿ"** ಉಪಾಸನೆಯನ್ನು ನಿರಾಕರಿಸಿದ್ದಾರೆ. ಉತ್ಕ್ರಾಂತಿಮಾರ್ಗ ಮತ್ತು ಗಮ್ಯವಾದ ಪರಬ್ರಹ್ಮನ ಸ್ವರೂಪ, ಗರುಡಮಾರ್ಗ ಶೇಷಮಾರ್ಗಗಳನ್ನು ನಿರೂಪಿಸಿ ಜೈನಾದಿಗಳಿಂದ ನಿರೂಪಿತವಾದ ಮೋಕ್ಷಸ್ವರೂಪಕ್ಕೆ ಅಪ್ರಾಮಾಣ್ಯವನ್ನು ಸ್ಥಾಪಿಸಿ, ಸ್ವಸ್ವರೂಪ ಆನಂದ ಆವಿರ್ಭಾವವೇ ಮೋಕ್ಷವೆಂದು ದೃಢೀಕರಿಸಿದ್ದಾರೆ. ಈ ಗ್ರಂಥದಲ್ಲಿ ಬಹುಭಾಗದಲ್ಲಿ ಪರವಾದಿ(ಅದ್ವೈತಿ)ಗಳನ್ನು ಸವಿಸ್ತಾರವಾಗಿ ನಿರಾಕರಿಸಿದ್ದಾರೆ. ಇದು ಶಾಸ್ತ್ರಗಳಲ್ಲಿ ಬಹುಮಾನ್ಯತೆ ಪಡೆದ ಕೃತಿಯಾಗಿದೆ.

೫. **ಪ್ರಮಾಣಲಕ್ಷಣಂ ನಾಮ** – ಇನ್ನು ಪ್ರಕರಣಗ್ರಂಥಗಳನ್ನು ರಚಿಸುತ್ತಾ, ಶ್ರೀ ಆಚಾರ್ಯರು ಮೊದಲು ಪ್ರಮಾಣಗಳನ್ನು ನಿರೂಪಿಸುವ ಗ್ರಂಥವನ್ನು ರಚಿಸಿದ್ದಾರೆ. ಇಲ್ಲಿ ಪ್ರಮಾಣದ ಲಕ್ಷಣ, ಸಂಖ್ಯಾ, ವಿಭಾಗ, ಅವುಗಳ ಲಕ್ಷಣಗಳನ್ನು ತಿಳಿಸುತ್ತಾ, ಪರವಾದಿಗಳಿಂದ ಅಂಗೀಕೃತವಾದ ಉಪಮಾನಾದಿ ಅತಿರಿಕ್ತ ಪ್ರಮಾಣಾದಿಗಳನ್ನು ಅನುಮಾನಾದಿಗಳಲ್ಲಿ ಅಂತರ್ಭಾವದ ಕ್ರಮವನ್ನು ನಿರೂಪಿಸಿದ್ದಾರೆ. ದುಷ್ಟವಾದ ಯುಕ್ತಿಗಳನ್ನು ನಿರೂಪಿಸುತ್ತಾ, ನೈಯಾಯಿಕರ ಸಿದ್ಧಾಂತವನ್ನು ಖಂಡಿಸಿದ್ದಾರೆ.

**"ವಿಶ್ವಂ ಮಿಥ್ಯಾ ದೃಶ್ಯತ್ವಾತ್"** ಎಂಬ ಅದ್ವೈತಿಗಳಿಂದ ಪ್ರಯುಕ್ತವಾದ ಅನುಮಾನದಲ್ಲಿ **"ಸರ್ವೇ ದೋಷಾ: ಮಿಥ್ಯಾತ್ವಾನುಮಾನೇ ದ್ರಷ್ಟವ್ಯ:"** ಎಂದು ಉದ್ಘೋಷಿಸಿ, ಸರ್ವ ದೋಷಗಳನ್ನೂ ಆ ಅನುಮಾನದಲ್ಲಿ ನಿರೂಪಿಸಿದ್ದಾರೆ. ಸಾಕ್ಷಿಯ ಸ್ವರೂಪ, ಅದು ಪ್ರಾಮಾಣಿಕವಾದ ಸಾಕ್ಷೀ ತ್ರೈಕಾಲಿಕಾಬಾಧ್ಯಗ್ರಾಹಿ ಎಂದು ತಿಳಿಸಿದ್ದಾರೆ.

ಸ್ಮೃತಿಯ ವಿಷಯ ಪ್ರಾಪ್ತವಾದಾಗ ಅದಕ್ಕೆ ಪ್ರಾಮಾಣ್ಯವನ್ನೂ, ಅದರ ಉತ್ಪತ್ತಿಯ ಕ್ರಮವನ್ನೂ ಅದಕ್ಕೆ ಪ್ರತ್ಯಕ್ಷದಲ್ಲಿ ಅಂತರ್ಭಾವವನ್ನೂ ತಿಳಿಸಿದ್ದಾರೆ. ಪ್ರತಿವಾದಿಗಳನ್ನು ಸೋಲಿಸಲಿಕ್ಕೆ ಕಾರಣವಾದ ನಿಗ್ರಹಸ್ಥಾನಗಳನ್ನು ಬೇರೆ ಎಂದು ಹೇಳುವ ತಾರ್ಕಿಕರ ಸಿದ್ಧಾಂತವನ್ನು ನಿರಾಕರಿಸಿ ಅದರ ಅಂತರ್ಭಾವಕ್ರಮಗಳನ್ನು ತಿಳಿಸಿ, ಇವೆಲ್ಲವೂ ಬ್ರಹ್ಮಕರ್ತನಿಂದ ನಿರೂಪಿತವಾಗಿದೆ ಎಂದು ತಿಳಿಸಿದ್ದಾರೆ.

೬. **ಕಥಾಲಕ್ಷಣಸಂಜ್ಞಿತಮ್** – ಇದರಲ್ಲಿ ಕಥಾಗಳ ಲಕ್ಷಣ ವಿಭಾಗವನ್ನು ತಿಳಿಸಿದ್ದಾರೆ. ಅನೇಕ ವಿದ್ವಾಂಸರು ಮಾಡುವ ವಿಚಾರಗೋಚರವಾದ ವಾಕ್ಯಪ್ರಬಂಧಕ್ಕೆ "ಕಥಾ" ಎನ್ನುತ್ತಾರೆ.

- ಈ **ಕಥಾ** – ವಾದ, ಜಲ್ಪ, ವಿತಂಡ ಎಂಬುದಾಗಿ ಮೂರು ಪ್ರಕಾರವಾಗಿದೆ. ಶ್ರೀಹರ್ಷನು **"ವಾದ–ವಿತಂಡ"**ಗಳೆರಡೇ **"ಕಥಾ"** ಎನ್ನುತ್ತಾನೆ. ಗೌಡನೈಯಾಯಿಕರು ವಾದ, ಜಲ್ಪ, ವಾದವಿತಂಡ, ಜಲ್ಪವಿತಂಡ ಎಂಬುದಾಗಿ ನಾಲ್ಕು ಪ್ರಕಾರವಿದೆಯೆನ್ನುತ್ತಾರೆ. ಅವರ ಎಲ್ಲಾ ಪ್ರಕಾರಗಳನ್ನೂ ನಿರಾಕರಿಸಿ ಪ್ರಕಾರತ್ರಯವೇ ಶಾಸ್ತ್ರಸಮ್ಮತವೆಂದು ನಿರೂಪಿಸಿದ್ದಾರೆ.
- ತತ್ವನಿರ್ಣಯವನ್ನು ಉದ್ದೇಶವಾಗಿಟ್ಟುಕೊಂಡು, ಗುರು–ಶಿಷ್ಯರುಗಳಿಗೆ ಹಾಗೂ ಸಜ್ಜನರಿಗೆ ನಡೆಯುವ ವಿಚಾರಗೋಷ್ಠಿಗೆ **"ವಾದ"** ಎನ್ನುತ್ತಾರೆ.
- ಖ್ಯಾತಿ ಹಾಗೂ ಸ್ಪರ್ಧೆಯಿಂದ ಸಜ್ಜನರಿಗೆ ನಡೆಯುವ ವಿಚಾರಗೋಷ್ಠಿಗೆ **"ಜಲ್ಪ"**ವೆನ್ನುತ್ತಾರೆ.
- ತಮ್ಮ ಸಿದ್ಧಾಂತವನ್ನು ಅಯೋಗ್ಯನಿಗೆ ತಿಳಿಸದೆ ಕೇವಲ ಅವರ ವಿಷಯವನ್ನು ನಿರಾಕರಿಸುವ ಯೋಗ್ಯಾಯೋಗ್ಯರಿಗೆ ನಡೆಯುವ ವಿಚಾರಗೋಷ್ಠಿಯು **"ವಿತಂಡಾ".**
- ವಾದದಲ್ಲಿ ಪ್ರಾಶ್ನಿಕರಾಗಲಿ, ಸಭಾಪತಿಗಳಾಗಲಿ ಇರಲೇಬೇಕೆಂಬ ನಿಯಮವಿಲ್ಲ. ಆದರೆ ಜಲ್ಪ–ವಿತಂಡಗಳಲ್ಲಿ ಇವರುಗಳು ಅವಶ್ಯಕ. ಪ್ರಾಶ್ನಿಕರು ರಾಗದ್ವೇಷರಹಿತರಾಗಿ, ವಿಷ್ಣುಭಕ್ತರಾಗಿ ವಿದ್ಯಾವಿಶಾರದರಾಗಿರಬೇಕು. ಅವರು ಒಬ್ಬರು ಅಥವಾ **3-5** ಹೀಗೆ ಬೆಸಸಂಖ್ಯೆಯಲ್ಲಿರಬೇಕು. ಒಬ್ಬನೇ ಪ್ರಾಶ್ನಿಕರಿದ್ದಲ್ಲಿ ಅವರು ಎಲ್ಲರ ಸಂಶಯಗಳನ್ನೂ ಕಳೆಯುವ ಸಾಮರ್ಥ್ಯವುಳ್ಳಾವನೂ, ಸ್ವಯಂ ಸಂಶಯರಹಿತನೂ, ಉದಾರ ಮನಸ್ಸುಳ್ಳಾವನೂ ಆಗಿರಬೇಕು. ವಾದದಲ್ಲಿ ಮೊದಲು ತನ್ನ ವಿಷಯವನ್ನು ಪ್ರತಿಪಾದಿಸಲು ಆಗಮವನ್ನು ಉದಾಹರಿಸಬೇಕು. ಪ್ರತಿವಾದಿಯು ಆ ಆಗಮಕ್ಕೆ ಅನ್ಯಾರ್ಥವನ್ನು ಹೇಳಬೇಕು. ಹೀಗೆ ವಾಕ್ಯಾರ್ಥವು ಪ್ರವೃತ್ತವಾಗುತ್ತದೆ.
- ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವಣವೇದ, ಭಾರತ, ಪಂಚರಾತ್ರ, ಮೂಲರಾಮಾಯಣ, ಇವುಗಳಿಗೆ **"ಸದಾಗಮ"**ಗಳೆಂದು ಹೆಸರು. ಇದಕ್ಕೆ ಅನುಕೂಲವಾಗಿರುವುದೆಲ್ಲ ಸದಾಗಮಗಳೇ. ಆಗಮಗಳಿಗೆ ತಮ್ಮ ಅಭಿಮತವಾದಂತಹ ಅಭಿಪ್ರಾಯದಲ್ಲಿ ಯುಕ್ತಿಗಳನ್ನು ತೋರಿಸಬಹುದು. ಪ್ರತ್ಯಕ್ಷಸಿದ್ಧವಾದ ವಿಚಾರದಲ್ಲಿ ಪ್ರತ್ಯಕ್ಷವನ್ನು, ಸಾಕ್ಷಿಯನ್ನಾದರೂ ಮೊದಲು ಉದಾಹರಿಸಬೇಕು. ವಾದವು ಬಹಳ ಕಾಲಪರ್ಯಂತರವಾಗಿ ಸಾಗುತ್ತದೆ. ಅಲ್ಪವು

ಪರಾಜಯಪರ್ಯಂತರವಾಗಿರುತ್ತದೆ. ಈ ರೀತಿಯಲ್ಲಿ ಬ್ರಹ್ಮತರ್ಕಕ್ಕೆ ಅನುಸಾರವಾಗಿ ಶ್ರೀಹರಿಯ ಪ್ರೀತಿಗಾಗಿ ನಿರುಪಿಸೆದ್ದೇನೆಂದು ಶ್ರೀ ಆಚಾರ್ಯರು ಈ ಗ್ರಂಥವನ್ನು ಉಪಸಂಹಾರಮಾಡಿದ್ದಾರೆ.

೭. **ಉಪಾಧಿಖಂಡನಂ ಚಕ್ರೇ** – ಈ ಗ್ರಂಥದಲ್ಲಿ ಅದ್ವೈತಿಗಳಿಂದ ನಿರೂಪಿತವಾದ ಉಪಾಧಿನಿಮಿತ್ತಕವಾಗಿ ಜೀವಬ್ರಹ್ಮರ ಭೇದವಾದವನ್ನು ನಿರಾಕರಿಸಿ, ಭೇದವು ಸ್ವಾಭಾವಿಕವೆಂದು ತೋರಿಸಿದ್ದಾರೆ. ಈ ಅಜ್ಞಾನವೆಂಬ ಉಪಾಧಿ ಸರ್ವಜ್ಞನಾದ ಬ್ರಹ್ಮನಿಗೆ ವಿರುದ್ಧವಾದ್ದರಿಂದ ಸಾಧ್ಯವಿಲ್ಲ. ಜೀವನಿಗೆ ಅಜ್ಞಾನವೆಂದರೆ ಬ್ರಹ್ಮನಿಂದ ಸ್ವಾಭಾವಿಕವಾಗಿ ಭಿನ್ನವಾದ ಜೀವನಿಲ್ಲವಾದ್ದರಿಂದ ಕೂಡುವುದಿಲ್ಲ.

ಉಪಾಧಿ ನಿಮಿತ್ತವಾಗಿ ಜೀವಬ್ರಹ್ಮರಿಗೆ ಭೇದವಿದೆ. ಆ ಜೀವನಿಗೆ ಅಜ್ಞಾನವೆಂದರೆ, ಆ ಉಪಾಧಿಯು ಜೀವನಿಗೆ ಸ್ವಾಭಾವಿಕವಾದರೆ ಆ ಭೇದವು ಸತ್ಯವಾಗಬೇಕಾಗುತ್ತದೆ. ಆ ಉಪಾಧಿಯು ಕಲ್ಪಿತವೆಂದರೆ ಅನವಸ್ಥಾ, ಅನ್ಯೋನ್ಯಾಶ್ರಯಾದಿಗಳು ಬರುತ್ತದೆ. ಉಪಾಧಿಗೆ ವಿದ್ಯಮಾನ ಭೇದದ ಜ್ಞಾಪಕತ್ವವಿದೆಯೇ ಹೊರತು ಇಲ್ಲದಿರುವ ಭೇದವನ್ನು ತಿಳಿಸಲು ಸಾಮರ್ಥ್ಯವಿಲ್ಲ. ಉಪಾಧಿಯು ಏಕದೇಶಕ್ಕೆ ಸಂಬಂಧವಾದರೆ ಆ ಏಕದೇಶವು ಹೇಗೆ ಎಂದು ಅನವಸ್ಥಾ ಬರುತ್ತದೆ. ಸರ್ವತ್ರ ಸಂಬಂಧವಾಗಿದೆ ಎಂದರೆ ಭೇದಕವೇ ಆಗಲಿಕ್ಕೆ ಸಾಧ್ಯವಿಲ್ಲ.

ಸ್ವಾಭಾವಿಕವಾಗಿ ಜೀವಬ್ರಹ್ಮರಿಗೆ ಐಕ್ಯವಿದ್ದಲ್ಲಿ ಬ್ರಹ್ಮನಿಗಾಗುವ ಸುಖ–ದು:ಖಗಳ ಭೋಗ ಜೀವನಿಗೂ ಆಗಬೇಕಾಗುತ್ತದೆ. ನಾನಾ ದೇಹಗಳ ಭೋಗ ಸೌಭರಿ ಋಷಿಗಳಿಗೆ ಆಗಿರುವುದು ಪುರಾಣಗಳಲ್ಲಿ ಪ್ರಸಿದ್ಧವಾಗಿದೆ. ಜೀವನಿಗೆ ತನಗೆ ಇತರ ಜೀವರಿಂದ ಭೇದವು ಪ್ರತ್ಯಕ್ಷಸಿದ್ಧವಾಗಿದೆ. ಜೀವನಿಗೆ ಬ್ರಹ್ಮನಿಂದ ಭೇದವೂ ಸಹ ತನಗೆ ಬ್ರಹ್ಮನಲ್ಲಿರುವ ಗುಣಗಳಿಗೆ ವಿರುದ್ಧ ಗುಣಗಳ ಅನುಭವವಿರುವುದರಿಂದ ಪ್ರತ್ಯಕ್ಷದಿಂದಲೇ ಗೋಚರವಾಗುತ್ತದೆ. ಭಗವಂತನಿಗಿರುವುದರ ಧರ್ಮಗಳು ಸತ್ಯವೇ ಆಗಿದ್ದಾವೆ. ಅದರ ವಿರುದ್ಧ ಗುಣಗಳು ಈ ಜೀವನಿಗೆ ಇರುವುದರಿಂದ ಈ ಜೀವನು ಸ್ವಾಮಿಯಿಂದ ಸ್ವಾಭಾವಿಕವಾಗಿಯೇ ಭಿನ್ನನಾಗಿದ್ದಾನೆಂದು ತಿಳಿಸಿದ್ದಾರೆ.

೮. **ಮಾಯಾವದಸ್ಯ ಖಂಡನಂ** – ಈ ಗ್ರಂಥದಲ್ಲಿ ಪರರು ನಿರೂಪಿಸುವ ಶಾಸ್ತ್ರದ ಆರಂಭಣೀಯತ್ವಕ್ಕೆ ಕಾರಣವಾದ ವಿಷಯ, ಪ್ರಯೋಜನ, ಅಧಿಕಾರಿ, ಸಂಬಂಧಗಳನ್ನು ನಿರಾಕರಿಸಿದ್ದಾರೆ. ಒಂದು ಪಕ್ಷದಲ್ಲಿ ಶಾಸ್ತ್ರವು ಅದ್ವೈತವನ್ನು ಪ್ರತಿಪಾದಿಸಿದರೆ ಅದು ಅನ್ಯಥಾ ಪ್ರತಿಪಾದಕವಾಗುವುದರಿಂದ

ಅದು ಆರಂಭಣೀಯವಾಗಲಿಕ್ಕೆ ಸಾಧ್ಯವಿಲ್ಲ. ಯಾವುದು ಆಯತಾರ್ಥವನ್ನು ಪ್ರತಿಪಾದಿಸುತ್ತದೋ ಅದು ಸಜ್ಜನರಿಂದ ಇಷ್ಟಸಾಧನವೆಂದು ಗ್ರಹಿಸಲ್ಪಟ್ಟಲ್ಲ. ಈ ಶಾಸ್ತ್ರದ ಪ್ರತಿಪಾದ್ಯವಾದ ಬ್ರಹ್ಮಾತ್ಮೈಕ್ಯವು ಅವರ ಮತದ ಪ್ರಕಾರವೇ ಯತಾರ್ಥವಾಗಿಲ್ಲ. ಆ ಐಕ್ಯವು ಬ್ರಹ್ಮಸ್ವರೂಪವೇ ಆದರೆ, ಆ ಬ್ರಹ್ಮನು ಶಾಸ್ತ್ರಕ್ಕೆ ಅಪೂರ್ವಾರ್ಥ ಪ್ರತಿಪಾದಕತ್ವ ಬರುವುದಿಲ್ಲ. ಆ ಐಕ್ಯವು ಬ್ರಹ್ಮನಿಂದ ಭಿನ್ನವಾದರೆ ಅದು ಯತಾರ್ಥವೆಂದು ಹೇಳಿದರೆ ಅದ್ವೈತ ಹಾನಿಯಾಗುತ್ತದೆ.

ಸ್ವಪ್ರಕಾಶರೂಪದಿಂದ ಬ್ರಹ್ಮಸಿದ್ದನಾಗಿದ್ದರೂ ಅದ್ವೈತಾದಿ ವಿಶೇಷ ರೂಪದಿಂದ ಸಿದ್ದನಾಗಿಲ್ಲ. ಉದಾಹರಣೆಗೆ ಸಿದ್ದಾಂತದಲ್ಲಿ ಗುಣಗುಣಿಗಳಿಗೆ ಅಭೇದವಿದ್ದರೂ ಗುಣಿಯಾದ ದ್ರವ್ಯವು ಕೈಗಳಿಗೆ ನಿಲುಕಿದರೂ ರೂಪವು ಹೇಗೆ ಗೊತ್ತಾಗುವುದಿಲ್ಲವೋ ಹಾಗೆ ಅದ್ವೈತ ಪೂರ್ವಕವಾಗಿ ಗೊತ್ತಲ್ಲವಾದ್ದರಿಂದ ಅದನ್ನು ತಿಳಿಸಲು ಶಾಸ್ತ್ರಗಳು ಹೊರಟಿವೆ ಎಂದು ಪೂರ್ವಪಕ್ಷ ಬಂದರೆ ಬ್ರಹ್ಮನು ನಿರ್ವಿಶೇಷನಾದ್ದರಿಂದ ದ್ರವ್ಯದಂತೆ ವ್ಯವಸ್ಥೆ ಮಾಡಲು ಸಾಧ್ಯವಿಲ್ಲ.

- ಬ್ರಹ್ಮಸ್ವರೂಪವು ಸ್ವಪ್ರಕಾಶವಾದ್ದರಿಂದ ಮತ್ತು ಸಿದ್ಧವಾಗಿರುವುದರಿಂದ ಅಜ್ಞಾನವು ಯಾವುದನ್ನೂ ಆವರಿಸಲು ಸಾಧ್ಯವಿಲ್ಲ.
- ಬ್ರಹ್ಮನಿಂದ ಭಿನ್ನವಾದ ಐಕ್ಯ ಮಿಥ್ಯೆಯೆಂದು ಹೇಳಿದರೆ ಆಗಮಗಳಲ್ಲಿ ಅಪ್ರಮಾಣಿಕವಾದ ವಿಷಯವನ್ನು ನಿರೂಪಿಸಿರುವುದರಿಂದ ಆ ಪ್ರಾಮಾಣ್ಯವು ಬರಬೇಕಾಗುತ್ತದೆ.
- ಐಕ್ಯವು ಮಿಥ್ಯೆಯಾದರೆ ಭೇದವು ಸತ್ಯವಾಗಬೇಕಾಗುತ್ತದೆ. ಹೀಗೆ ವಿಷಯವು ಇಲ್ಲವೆಂದಾದ ಮೇಲೆ ಪ್ರಯೋಜನವೂ ಸಹ ಇಲ್ಲ. ಮೋಕ್ಷಸ್ವರೂಪವಾದ ಅಜ್ಞಾನ ನಿವೃತ್ತಿಯೂ ಬ್ರಹ್ಮಸ್ವರೂಪವಾದ್ದರಿಂದ ಪೂರ್ವದಲ್ಲೇ ಸಿದ್ಧವಾದ್ದರಿಂದ ಪ್ರಯೋಜನವೂ ಇಲ್ಲ. ವಿಷಯಪ್ರಯೋಜನರಹಿತವಾದ್ದರಿಂದ ಅಧಿಕಾರಿಯೂ ಇಲ್ಲ. ಹಾಗೆಯೇ ಸಂಬಂಧವೂ ಇಲ್ಲ.
- ಭೇದವನ್ನು ಪ್ರತಿಪಾದಿಸಿದ್ದಾಗ ಗುಣಪೂರ್ಣನಾದ ಬ್ರಹ್ಮನೇ ವಿಷಯವೂ, ಮೋಕ್ಷೇಚ್ಛೆಯುಳ್ಳಂತಹ, ಬ್ರಹ್ಮನಿಂದ ಸ್ವಾಭಾವಿಕವಾಗಿ ಭಿನ್ನರಾದಂತಹ ಜೀವರೇ ಅಧಿಕಾರಿಗಳು, ಸ್ವಸ್ವರೂಪಾನಂದವನ್ನು ಪಡೆಯುವುದೇ ಪ್ರಯೋಜನ ಹಾಗೂ ಸಂಬಂಧವಿರುವುದರಿಂದ ಶಾಸ್ತ್ರಗಳು ಭೇದವನ್ನೇ ನಿರೂಪಿಸುತ್ತವೆ ಎಂದು ತಿಳಿಸಿದ್ದಾರೆ.

## ೯. ಚಕ್ರೇ ಪ್ರಪಂಚಮಿಥ್ಯಾತ್ವಾನುಮಾನ ಖಂಡನಮೇವ ಚ –

ಜಗಜ್ಜನ್ಮಾದಿಕಾರಣತ್ವವು ಶ್ರೀಹರಿಯ ಲಕ್ಷಣವೆಂದು ಎರಡನೇಸೂತ್ರದಲ್ಲಿ ನಿರೂಪಿಸಿದ್ದಾರೆ ಸೂತ್ರಕಾರರು. ಈ ಜಗತ್ತು ಮಿಥ್ಯೆಯಾದರೆ ಆ ಕಾರಣತ್ವವು ಸಂಗತವಾಗುವುದಿಲ್ಲವಾದ್ದರಿಂದ ಈ ಜಗತ್ತಿಗೆ ಸತ್ಯತ್ವವನ್ನು ಸ್ಥಾಪಿಸಲು ಶ್ರೀಮದಾಚಾರ್ಯರು, ಜಗತ್ತಿಗೆ ಮಿಥ್ಯಾತ್ವವನ್ನು ಹೇಳುವ **"ವಿಮತಂ ಮಿಥ್ಯಾ ದೃಶ್ಯತ್ವಾತ್"** ಎಂಬ ಅನುಮಾನವನ್ನು ಸವಿಸ್ತಾರವಾಗಿ ನಿರಾಕರಿಸಿದ್ದಾರೆ ಈ ಪ್ರಕರಣದಲ್ಲಿ. ಇಲ್ಲಿ ಸಾಧ್ಯವಾದ ಮಿಥ್ಯಾತ್ವವನ್ನು ಅಸತ್ತೆನ್ನುವೆಯೋ ಅನಿರ್ವಚನೀಯವೋ ಸದಸದ್ವಿಲಕ್ಷಣವೋ ಎಂದು ಪ್ರಶ್ನಿಸಿ ಮೊದಲೆರಡಕ್ಕೆ ಅಪ್ರಸಿದ್ಧ ವಿಶೇಷತ್ವವನ್ನು ಅಂತ್ಯಕ್ಕೆ ಸಿದ್ದಸಾಧನತಾ ದೋಷವನ್ನೂ ತೋರಿಸಿದ್ದಾರೆ. ದೃಶ್ಯತ್ವರೂಪವಾದ ಹೇತುವು ಪಕ್ಷದಲ್ಲಿ ಸತ್ಯವಾಗಿಲ್ಲ. ಹೇತುವು ಸತ್ಯವಾಗಿದ್ದ ಪಕ್ಷದಲ್ಲಿ, ಅಲ್ಲಿ ಮಿಥ್ಯಾತ್ವವು ಇಲ್ಲವಾದ್ದರಿಂದ ವ್ಯಭಿಚಾರವೆಂಬ ದೋಷವು ಬರುತ್ತದೆ. ಆದ್ದರಿಂದ ಪಕ್ಷದಲ್ಲಿ ಅಸತ್ತಾದ ದೃಶ್ಯತ್ವವಿದೆ ಎಂದು ಹೇಳಬೇಕು. ಆದ್ದರಿಂದ ಅದು ಪಕ್ಷವಿಲ್ಲವಾದ್ದರಿಂದ ಅಸಿದ್ಧಿಯು ಬರುತ್ತದೆ. ಪರಮಾತ್ಮನು ದೃಶ್ಯತ್ವವುಳ್ಳವನಾಗಿದ್ದಾನೆ. ಅಲ್ಲಿ ಮಿಥ್ಯಾತ್ವವು ಇಲ್ಲವಾದ್ದರಿಂದ ವ್ಯಭಿಚಾರವು ಬರುತ್ತದೆ. ಈ ಅನುಮಾನವು ಪ್ರತ್ಯಕ್ಷಕ್ಕೆ ವಿರುದ್ಧವಾದ್ದರಿಂದ ಬಾಧವು ಬರುತ್ತದೆ. ಈ ಅನುಮಾನವು ಪ್ರತ್ಯಕ್ಷಕ್ಕೆ ವಿರುದ್ಧವಾದ್ದರಿಂದ ಬಾಧವು ಬರುತ್ತದೆ. ವಿಶ್ವಂ ಸತ್ಯಂ ಎಂಬ ವಾಕ್ಯದಿಂದಲೂ ವಿರುದ್ಧವಾಗಿದೆ. **"ವಿಮತಂ ಸತ್ಯಂ ದೃಶ್ಯತ್ವಾತ್ ಆತ್ಮವತ್"** ಎಂದು ಪ್ರಯೋಗಿಸಲು ಸಾಧ್ಯವಾದ್ದರಿಂದ ಪ್ರಕರಣಸಮವೆಂಬ ದೋಷ ಬರುತ್ತದೆ. **"ವಿಮತಂ ಸತ್ಯಂ ಪ್ರಮಾಣ ದೃಶ್ಯತ್ವಾತ್"** ಎಂದು ಪ್ರತಿಯಾಗಿ ಸಾಧಿಸಲು ಸಾಧ್ಯವಾದ್ದರಿಂದ ಸತ್ಪ್ರತಿಪಕ್ಷ ಎಂಬ ದೋಷ ಬರುತ್ತದೆ. ಅದ್ವೈತಿಗಳಿಂದ ನಿರೂಪಿತವಾದ ಅನುಮಾನಕ್ಕೆ ಪ್ರಮಾಣ ವಿರುದ್ಧತ್ವಂ ಎಂಬ ಉಪಾಧಿಯಂತೆ ನಿರೂಪಿಸಿ ವ್ಯಾಪ್ಯಾತ್ವಾಸಿದ್ಧಿ ಎಂಬ ದೋಷವನ್ನು ತೋರಿಸಿದ್ದಾರೆ. ಹೀಗೆ ಈ ಅನುಮಾನದಲ್ಲಿ ಎಲ್ಲೂ ದೋಷಗಳನ್ನೂ ನಿರೂಪಿಸಿದ್ದಾರೆ.

## ೧೦. ಚಕಾರ ತತ್ತ್ವಸಂಖ್ಯಾನಮ್ ಸಾಧನಂ ವಿಷ್ಣುದರ್ಶನಮ್ –

ಈ ಪ್ರಕರಣದಲ್ಲಿ ತತ್ತ್ವಗಳನ್ನು ವಿಭಾಗಿಸಿ ತೋರಿಸಿದ್ದಾರೆ. ಅನಾರೋಪಿತವಾದದ್ದು ಅಂದರೆ ಪ್ರಮಾಣಕ್ಕೆ ವಿಷಯವಾದದ್ದು ತತ್ತ್ವವೆಂದು ಲಕ್ಷಣವನ್ನು ನಿರೂಪಿಸಿದ್ದಾರೆ.

- ಈ ತತ್ವಗಳು ಸ್ವತಂತ್ರತತ್ವ, ಅಸ್ವತಂತ್ರತತ್ವವೆಂದು ಎರಡು ಪ್ರಕಾರಗಳು.
- ಸ್ವತಂತ್ರತತ್ವ ಭಗವಂತನಾದ ನಾರಾಯಣ, ಬಾಕಿ ಎಲ್ಲ ಪದಾರ್ಥಗಳೂ ಅಸ್ವತಂತ್ರವಾಗಿದ್ದಾವೆ.
- ಅಸ್ವತಂತ್ರ ಪದಾರ್ಥಗಳು ಭಾವ, ಅಭಾವ ಎಂದು ಪುನ: ವಿಂಗಡಿಸಲಾಗಿದೆ.

- ಈ ಅಭಾವ ಪದಾರ್ಥ ಪ್ರಾಗಭಾವ, ಪ್ರಧ್ವಂಸಾಭಾವ, ಸದಾ(ಅತ್ಯಂತಾ)ಭಾವವೆಂದು ಮೂರು ಪ್ರಕಾರವು. ಭಾವ ಪದಾರ್ಥವು ಚೇತನ, ಅಚೇತನವೆಂದು ಎರಡು ರೀತಿ.

- ಚೇತನವು ದು:ಖಸ್ಪೃಷ್ಟ, ದು:ಖಾಶ್ರುಷ್ಟ ಎಂದು ದ್ವಿವಿದ. ದು:ಖಾಸ್ಪೃಷ್ಟ ಚೇತನವೇ ರಮಾದೇವಿಯರು. ದು:ಖಸ್ಪೃಷ್ಟರಲ್ಲಿ ಮುಕ್ತಿಯೋಗ್ಯರು ಮತ್ತು ಅಯೋಗ್ಯರು ಎಂದು ಎರಡು ವಿಧ.

- ಮುಕ್ತಿಯೋಗ್ಯರಲ್ಲಿ ಮುಕ್ತಿಯನ್ನು ಹೊಂದಿದವರು ಮತ್ತು ಮುಕ್ತಿಯನ್ನು ಇನ್ನೂ ಹೊಂದದೇ ಇರುವವರೆಂದು ಎರಡುವಿಧ. ಮುಕ್ತರು ದೇವತೆ, ಋಷಿ, ಪಿತೃ, ಚಕ್ರವರ್ತಿ ಮತ್ತು ನರರೆಂದು ಐದು ಪ್ರಕಾರ. ಅದೇ ರೀತಿ ಸಂಸಾರದಲ್ಲಿರುವ ಮುಕ್ತಿಯೋಗ್ಯರೂ ಸಹ ಐದು ಪ್ರಕಾರ. ಮುಕ್ತಿ ಅಯೋಗ್ಯರಲ್ಲೂ ಸಹ ತಮಸ್ಸನ್ನು ಹೊಂದಿದವರು ಮತ್ತು ಸಂಸಾರದಲ್ಲಿ ಇರುವವರೆಂದು ಎರಡು ವಿಧ. ತಮಸ್ಸನ್ನು ಹೊಂದಿದವರೂ ಸಹ ಅ)ದೈತ್ಯರು, ಆ)ರಾಕ್ಷಸರು, ಇ}ಪಿಶಾಚಿಗಳು, ಈ)ಮರ್ತ್ಯಾಧಮರೆಂದು ನಾಲ್ಕು ವಿಧ.

- ಸಂಸಾರದಲ್ಲಿ ಇರುವವರಲ್ಲೂ ಸಹ ತಮಸ್ಸಿಗೆ ಹೋಗಲಿಕ್ಕೆ ಯೋಗ್ಯರು ಮತ್ತು ನಿತ್ಯಸಂಸಾರಿಗಳೆಂದು ದ್ವಿವಿಧ.

- ಹೀಗೆ ಚೇತನವಿಭಾಗವನ್ನು ವಿಸ್ತಾರವಾಗಿ ಮಾಡಿ, ಅಚೇತನಗಳು ಸಹ ನಿತ್ಯ, ಅನಿತ್ಯ, ನಿತ್ಯಾನಿತ್ಯ ಎಂದು ಮೂರು ಪ್ರಕಾರವು. ಅವ್ಯಾಕೃತ ಆಕಾಶ, ವೇದಗಳು, ವರ್ಣಗಳು ನಿತ್ಯವು. ಪ್ರಕೃತಿ, ಕಾಲ, ಪುರಾಣಗಳು ನಿತ್ಯಾನಿತ್ಯ, ಜಗತ್ತು ಅನಿತ್ಯವು. ಹೀಗೆ ಈ ನಾನಾ ಪ್ರಕ್ರಾರವಾದ ಪದಾರ್ಥಗಳಿಗೆ ಯಥಾಯೋಗ್ಯವಾಗಿ ಸೃಷ್ಟಿ, ಸ್ಥಿತಿ, ಲಯ, ಜ್ಞಾನ, ಅಜ್ಞಾನ, ಮೋಕ್ಷಾದಿ ದಾತನು ಶ್ರೀಹರಿ ಎಂದು ತಿಳಿಯಬೇಕು.

## ೧೧. **ಗ್ರಂಥಂ ತತ್ತ್ವವಿವೇಕಾಖ್ಯಂ** –

ತತ್ತ್ವಸಂಖ್ಯಾನದಲ್ಲಿ ನಿರೂಪಿತವಾದ ವಿಷಯಕ್ಕೆ ಪ್ರಮಾಣರೂಪವಾಗಿ ಈ ಗ್ರಂಥದಲ್ಲಿ ಬ್ರಹ್ಮತರ್ಕಾದಿ ವಾಕ್ಯಗಳನ್ನು ಉದಾಹರಿಸಿದ್ದಾರೆ. ಅನ್ಯೋನ್ಯಾಭಾವ (ಭೇದ) ಧರ್ಮಸ್ವರೂಪವಾಗಿದೆ. ಖಂಡಿತ ಗುಣಗುಣಿಗಳಿಗೆ ಭೇದವೂ ಐಕ್ಯವೂ ಉಂಟು. ಅಖಂಡಿತ ಗುಣಗುಣಿಗಳಿಗೆ ಅಭೇದವಿಲ್ಲ. ಅಂಶಾಂಶಿಗಳಿಗೆ, ಕ್ರಿಯಾಕ್ರಿಯಾವುಳ್ಳಂತಹ ಪದಾರ್ಥಗಳಿಗೆ, ಜಾತಿ ಮತ್ತು ವ್ಯಕ್ತಿಗಳಿಗೆ ಎಲ್ಲದರಲ್ಲೂ ಹೀಗೆ ತಿಳಿಯಬೇಕು. ಈ ರೀತಿಯಾಗಿ ವಿಭಿನ್ನ ಪ್ರಕಾರವಾದ ಸಮಸ್ತ ಪದಾರ್ಥಗಳೂ ಸಹ ಶ್ರೀಹರಿಯ ಅಧೀನವಾಗಿದೆ ಎಂಬ ಜ್ಞಾನವೇ ಮೋಕ್ಷಕ್ಕೆ ಸಾಧನವು.

## ೧೨. ತತ್ತ್ವೋದ್ಯೋತಂ ಹರೇ: ಪ್ರಿಯಮ್ –

ಈ ಪ್ರಕರಣಗ್ರಂಥವು ಶ್ರೀಹರಿಯು ಸಮಸ್ತ ಚೇತನಾಚೇತನಾತ್ಮಕ ಜಗತ್ತಿಗೆ ನಿಯಾಮಕನಾಗಿದ್ದಾನೆಂದು ತಿಳಿಸಲು **"ವಿಮತ: ಭಿನ್ನ: ಮುಕ್ತತ್ವಾತ್"** ಎಂಬ ಅನುಮಾನವನ್ನು ಆಧರಿಸಿ ಪ್ರವೃತ್ತವಾಗಿದೆ. ಮೋಕ್ಷದಲ್ಲಿಯೂ ಸ್ವಾಮಿಯು ನಿಯಾಮಕನಾಗಿರುವುದರಿಂದ ಜೀವ–ಬ್ರಹ್ಮರಿಗೆ ಭೇದವೇ ಇದೆ. ಅನಿರ್ವಚನೀಯವಾದ ವಸ್ತುವೇ ಜಗತ್ತಿನಲ್ಲಿ ಅಪ್ರಸಿದ್ಧವಾಗಿದೆ. ಈ ವಸ್ತುವಿಷಯದಲ್ಲಿ ಪ್ರತ್ಯಕ್ಷಾದಿಗಳು ಪ್ರಮಾಣವಾಗಲಿಕ್ಕೆ ಸಾಧ್ಯವಿಲ್ಲ. ಮಿಥ್ಯೆಯೆಂಬ ಶಬ್ದವು **"ಅಸತ್"** ಎಂಬ ಅರ್ಥದಲ್ಲಿದೆಯೇ ಹೊರತು **"ಅನಿರ್ವಚನೀಯ"** ಎಂಬ ಅರ್ಥದಲ್ಲಿಲ್ಲ. ಅನಿರ್ವಚನೀಯ ವಸ್ತುವಿನ ವಿಷಯದಲ್ಲಿ ಆಗಮಗಳು ಪ್ರಮಾಣವೆಂದು ನಿರೂಪಿಸಲು ಹೊರಟಿರುವ ಅವುಗಳಿಗೆ ಪುರಾಣವಾಕ್ಯಗಳಿಂದ ಅನ್ಯಾರ್ಥವನ್ನು ನಿರೂಪಿಸುವುದು ಬಲು ರಮಣೀಯವಾಗಿದೆ.

ಭಗವಂತನ ವಾಕ್ಯಗಳಿಂದಲೇ ಜಗತ್ತಿಗೆ ನಿತ್ಯತ್ವವನ್ನೂ ಶ್ರುತಿಯಿಂದ ಸತ್ಯತ್ತ್ವವನ್ನೂ ನಿರೂಪಿಸಿದೆ. ಬೌದ್ಧರಿಗೂ ಮಾಯವಾದಿಗಳಿಗೂ ಶೂನ್ಯಬ್ರಹ್ಮನಲ್ಲಿ ವೈಲಕ್ಷಣ್ಯವಿಲ್ಲವಾದ್ದರಿಂದ ಸಾಮ್ಯವುಂಟು. ಜಗತ್ತಿನ ವಿಷಯದಲ್ಲಿ ಅವರು ಸಾಂವೃತಿಕ ಸತ್ಯವೆಂದೂ, ಇವರು ವ್ಯಾವಹಾರಿಕ ಸತ್ಯವೆಂದೂ ಹೇಳುತ್ತಾರೆ. ಆದ್ದರಿಂದ ಮಾಯಾವಾದಿಗಳನ್ನು ಪ್ರಚ್ಛನ್ನಬೌದ್ಧರೆಂದು ಹೇಳಬಹುದು. ವೇದಗಳು ಲಕ್ಷಣವಾಕ್ಯಗಳು ಸ್ವರೂಪಮಾತ್ರ ಬೋಧಕವೆನ್ನುವ ವಾದ ನಿರಾಕರಣೆ ಬಲು ಸೊಗಸಾಗಿದೆ. ನಿರ್ಗುಣತ್ವ ಪ್ರತಿಪಾದಿಸಲಿಕ್ಕೆ ಪ್ರವೃತ್ತವಾದ ವಾಕ್ಯಗಳನ್ನು ಸಗುಣ ಪ್ರತಿಪಾದಕವೆಂದು ತಿಳಿಸುವುದು ಒಂದು ಆಶ್ಚರ್ಯವೇ ಸರಿ. ಹೀಗೆ ಮೋಕ್ಷದಲ್ಲಿ ಭೇದವೂ ಇದೆ. ಹಾಗೂ ತಾರತಮ್ಯವೂ ಉಂಟು ಎಂದು ನಿರೂಪಿಸುವ ಸಮಯದಲ್ಲ **"ಪರಮಂ ಸಾಮ್ಯಂ ಉಪೈತಿ"** ಎಂಬ ಶ್ರುತ್ಯರ್ಥವನ್ನು ತಿಳಿಸಿದೆ.

## ೧೩. ಕರ್ಮನಿರ್ಣಯನಾಮಾನಂ ಗ್ರಂಥಂ ನ್ಯಾಯಾರ್ಥಬೃಂಹಿತಮ್ –

ಈ ಪ್ರಕರಣದಲ್ಲಿ ನಿರ್ವಿಶೇಷವಸ್ತುವೇ ಇರಲಿಕ್ಕೆ ಸಾಧ್ಯವಿಲ್ಲವೆಂದು ತೋರಿಸಿದ್ದಾರೆ. ಮಹಾನಾಮ್ನೀ ಪ್ರಕರಣದಲ್ಲಿ ಇರುವ ವಾಕ್ಯಗಳನ್ನು ಭಗವಂತನ ಪರವಾಗಿ ಅರ್ಥ ಮಾಡುವ ಕ್ರಮ ತಿಳಿಸಲ್ಪಟ್ಟಿದೆ. **"ವಿದಾಮಘವನ್ ವಿದಾ", "ಅರ್ಚತ, ಪ್ರಾರ್ಚತ"** ಇತ್ಯಾದಿ ವಾಕ್ಯಗಳು ಶ್ರೀಹರಿಯ ಗುಣಗಳನ್ನು ನಿರೂಪಿಸುತ್ತವೆ ಎಂದು ತಿಳಿಸುತ್ತಾ ನ್ಯಾಯ ಸಮ್ಮತವಾಗಿ ಎಲ್ಲ ವಾಕ್ಯಗಳೂ ಶ್ರೀಹರಿಪರವೆಂದು ನಿರೂಪಿಸಲಾಗಿದೆ.

## ೧೪. ಸುಖತೀರ್ಥ ಯತಿ: ಚಕ್ರೇ ವಿಷ್ಣುತತ್ತ್ವವಿನಿರ್ಣಯಮ್ –

ಇದು ಪ್ರಕರಣರಾಜನೆಂದು ಬಣ್ಣಿಸಲ್ಪಟ್ಟಿದೆ. ಇಲ್ಲಿ ಮೊದಲು ವೇದಗಳಿಗೆ ಅಪೌರುಷೇಯತ್ವವನ್ನು ಸ್ಥಾಪಿಸುವ ಸಮಯದಲ್ಲಿ ಬೌದ್ಧ, ಜೈನ, ನಾಸ್ತಿಕಾದಿ ಮತಗಳನ್ನು ಹಾಗೂ ಪೌರುಷೇಯತ್ವವನ್ನು ನಿರೂಪಿಸುವ ತಾರ್ಕಿರ ಮತವೂ ನಿರಾಕರಿಸಲ್ಪಟ್ಟಿದೆ. ಪ್ರಾಮಾಣ್ಯಕ್ಕೆ ಸ್ವತಂತ್ರತ್ವವು ನಿರೂಪಿತವಾಗಿದೆ. ವರ್ಣಾತ್ಮಕ ಶಬ್ದಗಳಿಗೆ ನಿತ್ಯತ್ವವನ್ನು ಇದರಲ್ಲಿ ಯುಕ್ತಿಪೂರ್ವಕವಾಗಿ ನಿರುಪಿಸಲಾಗಿದೆ. ಪ್ರತ್ಯಕ್ಷಾದಿ ಪ್ರಮಾಣಗಳ ಲಕ್ಷಣಗಳನ್ನು ಅವಯವಗಳ ವಿಚಾರವನ್ನು ಪ್ರಮಾಣವಾಕ್ಯದಿಂದ ನಿರ್ಧರಿಸಲಾಗಿದೆ. ಹೀಗೆ ವೇದಗಳಿಗೆ ಪರಮ ಪ್ರಾಮಾಣ್ಯವು ನಿರೂಪಿತವಾದ ಮೇಲೆ ಈ ಪ್ರಕಾರದ ವೇದಗಳು ಭೇದವನ್ನೇ ಹಾಗೂ ಶ್ರೀ ಹರಿಯ ಗುಣಗಳನ್ನೇ ನಿರೂಪಿಸುತ್ತವೆ ಎಂದು ಯುಕ್ತಿಪ್ರಮಾಣ ಪೂರ್ವಕವಾಗಿ ಸ್ಥಾಪಿಸಲಾಗಿದೆ.

ವೇದಗಳು ಭೇದವನ್ನು ಅನುವಾದಿಸಿ, ಅದನ್ನು ನಿರಾಕರಿಸಿ, ಅದ್ವೈತವನ್ನೇ ಪ್ರತಿಪಾದಿಸುತ್ತವೆ ಎಂಬ ವಾದವನ್ನು ಸವಿಸ್ತಾರವಾಗಿ ಖಂಡಿಸಿ, ಭೇದವಾಕ್ಯಗಳು ಪರಮಾಪೂರ್ವವಾದ ವಿಷಯವನ್ನೇ ತಿಳಿಸುತ್ತವೆ ಎಂಬುದನ್ನು ಈ ಗ್ರಂಥದಲ್ಲಿ ತೋರಿಸಲಾಗಿದೆ. ಏಕಜೀವವಾದ, ಬಹುಜೀವವಾದಗಳನ್ನು ನಿರಾಕರಿಸಿದೆ. ಜಗತ್ತು ಬ್ರಹ್ಮನಲ್ಲಿ ಆರೋಪಿತವೆಂದರೆ ಅಧಿಷ್ಠಾನವಾದ ಬ್ರಹ್ಮನಿಗೆ ಹಾಗೂ ಪ್ರಧಾನವಾದ ಜಗತ್ತಿಗೆ ಎಂದು ಅವಶ್ಯಕವಾಗಿ ಸತ್ಯದ್ವಯಭೋಧಕವಾದ ವಾಕ್ಯಗಳಿಗೆ ಉಪಕ್ರಮಾದಿ ಪ್ರಮಾಣಗಳಿಂದ ಭೇದಪರವಾಗಿ ನಿರೂಪಿತವಾಗಿದೆ. ಉಪಕ್ರಮಾದಿ ತಾತ್ಪರ್ಯ ನಿರ್ಣಾಯಕ ಲಿಂಗಗಳೂ ಸಹ ಭೇದ ಪರವಾದ್ದರಿಂದ ಸಕಲ ವೇದಗಳಿಗೆ ಶ್ರೀಹರಿಯ ಸರ್ವೋತ್ತಮತ್ವದಲ್ಲೇ ತಾತ್ಪರ್ಯವೆಂದು ನಿರೂಪಿಸಲಾಗಿದೆ. ಹೀಗೆ ಮೋಕ್ಷದಲ್ಲಿ ತಾರತಮ್ಯವನ್ನು ಹಾಗೂ ಪಂಚಭೇದವನ್ನೂ ಹಾಗೂ ಶ್ರೀಹರಿಗೆ ನಿರ್ದೋಷತ್ವವನ್ನೂ ಪ್ರಮಾಣಗಳಿಂದ ಸ್ಥಾಪಿಸಲಾಗಿದೆ.

## ೧೫. ಋಗ್ಭಾಷ್ಯಂ ಚ ಚಕಾರಾಸೌ ಸರ್ವ ವೇದಾರ್ಥ ನಿರ್ಣಯಮ್ –

ಈ ಗ್ರಂಥದಲ್ಲಿ ಶ್ರೀ ಮಧ್ವಾಚಾರ್ಯರು ಸೂಕ್ತಗಳಿಗೆ ಅಧ್ಯಾಯತ್ರಯ ಪರ್ಯಂತರವಾಗಿ ಭಗವತ್ಪರವಾಗಿ ನಿರೂಪಿಸುವ ಕ್ರಮವನ್ನು, ಇದೇ ಪ್ರಕಾರವಾಗಿ ಉಳಿದ ಎಲ್ಲಾ ವೇದವಾಕ್ಯಗಳನ್ನು ಬ್ರಹ್ಮಸೂತ್ರಗಳಲ್ಲಿ ತೋರಿಸಿದ ಮಾರ್ಗದಲ್ಲಿ ತಿಳಿದುಕೊಳ್ಳಲಿ ಎಂದು ತಿಳಿಸಿದ್ದಾರೆ. ಓಂಕಾರ, ವ್ಯಾಹೃತಿ, ಗಾಯತ್ರಿ ಮಂಟ್ರಗಳು ಶ್ರೀಹರಿಯನ್ನು ಪ್ರತಿಪಾದಿಸುವ ಕ್ರಮವನ್ನು ತಿಳಿಸಿದ್ದಾರೆ. ಛಂದೋಭಿಮಾನಿ ದೇವತೆಗಳನ್ನು ತಿಳಿಸಿದ್ದಾರೆ. ಶಬ್ದಗಳನ್ನು ಸಮನ್ವಯ ಮಾಡುವ ಸಂದರ್ಭದಲ್ಲಿ

ಧಾತುಗಳನ್ನು, ಪ್ರತ್ಯಯಗಳನ್ನು, ಆದೇಶ, ಆಗಮಗಳನ್ನು ಸಪ್ರಮಾಣವಾಗಿ ನಿರೂಪಿಸಿದ್ದಾರೆ. ಪ್ರಾಣಿನಿ ಶಾಸ್ತ್ರದಲ್ಲಿ ದೊರೆಯದ ಕೆಲವು ಧಾತುಗಳನ್ನೂ ಸಹ ಹಾಗೂ ಹೊಸ ಅರ್ಥಗಳನ್ನು ನಿರೂಪಿಸಿದ್ದಾರೆ.

**"ತೃತೀಯಾಽತಿಶಯೇ, ರಲಯೋಽಭೇದ:, ವಬಯೋಽಭೇದ:"** ಇತ್ಯಾದಿ ನಿಯಮಗಳನ್ನು ಅಳವಡಿಸಿ ಇತರ ದೇವತೆಗಳಲ್ಲಿ ರೂಡವಾದ ಶಬ್ದಗಳನ್ನು ಶ್ರೀಹರಿಯಲ್ಲಿ ಸಮನ್ವಯಿಸುವ ಕ್ರಮವನ್ನು ಅತಿ ವಿಲಕ್ಷಣವಾಗಿ ತೋರಿಸಿದ್ದಾರೆ.

**"ಹಿತತ್ವಾತ್ ರಮಣಿಯತ್ವಾತ್ ಹಿರಣ್ಯಂ ವರ್ಣರೋಽಪಿ ವಾ"** ಎಂದು ಅತ್ಯಂತ ಹಿತನಾದ, ಮನೋಹರನಾಗಿದ್ದನಾದ್ದರಿಂದ ಅಥವಾ ವರ್ಣದಿಂದ ಹಿರಣ್ಯನಾಗಿದ್ದರಿಂದ ಹಿರಣ್ಯಪಾದ ಇತ್ಯಾದಿ ಶಬ್ದಗಳು ಶ್ರೀಹರಿಯಲ್ಲಿ ಸಮನ್ವಯದ ಕ್ರಮವನ್ನು ಪ್ರಮಾಣಪೂರ್ವಕವಾಗಿ ತೋರಿಸಿದ್ದಾರೆ.

## ೧೬. **ಐತರೇಯುವ್** –

ಉಪನಿಷತ್ಪ್ರಸ್ಥಾನದಲ್ಲಿ ಶ್ರೀಮದಾಚಾರ್ಯರಿಗೆ ಅತ್ಯಂತ ಪ್ರೀತ್ಯಾಸ್ಪದವಾದ ಗ್ರಂಥವು ಇದು. ಶ್ರೀ ಮಧ್ವರು ಈ ಗ್ರಂಥವನ್ನು ಸುಖತೀರ್ಥರಿಗೆ ಮೂರು ಆವೃತ್ತಿ ಪಾಠವನ್ನು ಹೇಳಿದ್ದಾರೆ. ಇಲ್ಲಿ ಬೃಹತೀ ಮಂತ್ರಗಳಿಗೆ ಭಗವತ್ಪರವಾಗಿ ಅರ್ಥೈಸಿದ್ದಾರೆ. **"ಸಂಸಾರಾತ್ ಪಾವಯಿತ್ವಾಸೌ ಮಾಹಾನಂದೇ ಮಿನೋತ್ಯಯುವ್। ಪವಮಾನ: ತತೋ ವಿಷ್ಣು:"** ಇತ್ಯಾದಿ ರೀತಿಗಳಿಂದ ಸರ್ವಶಬ್ದಗಳೂ ವಿಷ್ಣುವನ್ನು ಪರಮ ಮುಖ್ಯವೃತ್ತಿಯಿಂದ ಹಾಗು ಮುಖ್ಯ ಪ್ರಾನದೇವರನ್ನು ಮುಖ್ಯವೃತ್ತಿಯಿಂದ ಪ್ರತಿಪಾದಿಸುತ್ತದೆ.

**"ಪ್ರಾಣೋವಾಹಂ ಅಸ್ಮಿ ಋಷೇ"** ಎಂಭ ಇಂದ್ರದೇವರ ವಾಕ್ಯವು ಅಂತರ್ಯಾಮಿ ದೃಷ್ಟಿಯಿಂದ ಭೇದಪರವೆಂದು, ಸೂತ್ರಾದಿ ಪ್ರಮಾಣಗಳಿಂದ ನಿರೂಪಿಸಿದ್ದಾರೆ. ಬ್ರಹ್ಮನು ಅವಾಚ್ಯನೆಂಬ ವಾದವನ್ನು ನಿರಾಕರಿಸುತ್ತಾ ಶ್ರೀ ಆಚಾರ್ಯರು **"ವಿಶದಂ ಕ್ಷೀರಮಾಧುರ್ಯಂ ಸ್ಥಿರಮಾಜ್ಯಸ್ಯ ತೀಕ್ಷ್ಣಕವ್ । ಗುಡಸ್ಯ ಪನಸಾದೀನಾಂ ನಿರ್ಹಾರಿತ್ಯಭಿಧೀಯತೇ"** ಎಂಬುದಾಗಿ ಪಾಕ ಶಾಸ್ತ್ರದಲ್ಲೂ ತಮ್ಮ ಜ್ಞಾನವನ್ನು ಪ್ರಕಟಿಸಿ, ಸರ್ವ ಶಬ್ದಗಳಿಂದ ಅವಾಚ್ಯವಾದ ವಸ್ತುವು ಲಕ್ಷ್ಯವಾಗಲಿಕ್ಕೆ ಸಾಧ್ಯವಿಲ್ಲವೆಂದು ನಿರೂಪಿಸಿದ್ದಾರೆ. ಉಕ್ಥಾದಿಗಳ ಪಂಚಸ್ವರೂಪ ಭಗವಂತನ ಉಪಾಸನಾ ಮರ್ಗವನ್ನು ತಿಳಿಸಿದ್ದಾರೆ. ಶ್ರೀ ಹರಿಯು ತನ್ನ ಅವಯುವವಿಶೇಷಗಳಿಂದ ದೇವತಾ ಸೃಷ್ಟಿಕ್ರಮವನ್ನು, ವೀಣಾದಿ ಉಪಾಸನೆಗಳನ್ನು ತಿಳಿಸಿದ್ದಾರೆ.

## ೧೭. ತೈತ್ತಿರೀಯಮ್ –

- ಈ ಉಪನಿಷತ್ತಿನಲ್ಲಿ ವರಣೀಯ (ಸ್ತೋತ್ರ ಮಾಡಿಸಿಕೊಳ್ಳಲಿಕ್ಕೆ ಎಲ್ಲರಿಂದ ಯೋಗ್ಯ)ನಾದ್ದರಿಂದ **ವರ್ಣ, ಸ್ವರತ;**
- ತನ್ನಲ್ಲಿ ತಾನು ರಮಿಸುತ್ತಾನಾದ್ದರಿಂದ **ಸ್ವರ:;**
- ಮಾನಾತ್, ಜ್ಞಾನನಿಮಿತ್ತಕವಾಗಿ ರಕ್ಷಕನಾದುದರಿಂದ **ಮಾತ್ರ.**
- ಸರ್ವರೂಪಗಳಲ್ಲೂ ಸಮನಾದ್ದರಿಂದ **ಸಾಮ**

ಹೀಗೆ ಶ್ರೀಹರಿಯಲ್ಲಿ ಸಮನ್ವಯ ಮಾಡಿತೋರಿಸಿದ್ದಾರೆ.

- **ಭೂರ್ಭುವ: ಸ್ವ:** ಎಂಬ ವ್ಯಾಹೃತಿ ಮಂತ್ರಗಳ ಉಪಾಸನಾ ಪ್ರಕಾರವನ್ನು ತಿಳಿಸಿದ್ದಾರೆ.
- ಶಿಷ್ಯನಿಗೆ ಗುರುಗಳು ಸಕಲ ಶಾಸ್ತ್ರಾಧ್ಯಯನ ಮಾಡಿಸಿದ ಮೇಲೆ ಆ ಶಿಷ್ಯನಿಗೆ ಆಶೀರ್ವಾದ ಮಾಡಬೇಕಾದ ರೀತಿ ಮತ್ತು ಆ ಶಿಷ್ಯ ಯಾವ ರೀತಿ ಇರಬೇಕೆಂಬ ರೀತಿಯನ್ನು ನಿರೂಪಿಸಿದ್ದಾರೆ.
- ಶ್ರೀಹರಿಗೆ ಜಗಜ್ಜನ್ಮಾದಿಕಾರಣತ್ವವನ್ನು ತಿಳಿಸಿಕೊಡುವುದಕ್ಕೋಸ್ಕರವಾಗಿ ಪರಮಾತ್ಮನಿಂದ ಈ ಜಗತ್ತಿನ ಸೃಷ್ಟಿಯನ್ನು,
- ಅನ್ನಮಯಾದಿ ಪ್ರಕರಣಗಳಲ್ಲಿ ಅನ್ನಮಯಾದಿ ಶಬ್ದಗಳಿಂದ ವಾಚ್ಯನಾದ ಸ್ವಾಮಿಯ ಉಪಾಸನಕ್ರಮವನ್ನು,
- ಪರಮಾತ್ಮನ ಭಯದಿಂದಲೇ ಇಂದ್ರ, ಯಮಾದಿ ಸಕಲರು ತಮ್ಮ ತಮ್ಮ ಕಾರ್ಯಗಳಲ್ಲಿ ಆಸಕ್ತರಾಗಿದ್ದಾರೆಂದೂ ತಿಳಿಸಿದ್ದಾರೆ.
- ಕೃತಯುಗದಲ್ಲಿ ಪೃಥ್ವಿಯು ಪೂರ್ಣವಾಗಿದ್ದು, ಮಳೆ–ಬೆಳೆಗಳು ಸಮೃದ್ಧವಾದಾಗ, ಎಲ್ಲ ಸೌಕರ್ಯಗಳೂ ಇದ್ದಾಗ ಏನು ಆನಂದವೋ ಅದು ಮೋಕ್ಷದಲ್ಲಿ ಮನುಷ್ಯೋತ್ತಮರಿಗೆ ಆಗುವ ಆನಂದವೆಂದು ಆರಂಭಿಸಿ, ಮನುಷ್ಯಗಂಧವರು, ದೇವಗಂಧರ್ವರು, ಪಿತೃಗಳು, ಅಜಾನಜ ದೇವತೆಗಳು, ಕರ್ಮದೇವತೆಗಳು, ದೇವತೆಗಳು, ಬೃಹಸ್ಪತ್ಯಾಚಾರ್ಯರು, ರುದ್ರದೇವರು, ಇಂದ್ರದೇವರು, ಮುಖ್ಯಪ್ರಾಣದೇವರು ಹೀಗೆ ಒಬ್ಬೊಬ್ಬರಿಗಿಂತ, ಒಬ್ಬೊಬ್ಬರಿಗೆ ನೂರು ಪಟ್ಟು ಆನಂದ ಮೋಕ್ಷದಲ್ಲಿ ಆಗುತ್ತದೆ ಎಂದು ಸವಿಸ್ತಾರವಾಗಿ, ಮೋಕ್ಷದಲ್ಲೂ ತಾರತಮ್ಯವನ್ನು ನಿರೂಪಿಸಿದ್ದಾರೆ. ಭೃಗು–ವರುಣ ಸಂವಾದ ನಿಮಿತ್ತವಾಗಿ, ಅನ್ನ, ಪ್ರಾಣ, ಮನಸ್ಸು, ವಿಜ್ಞಾನ, ಆನಂದರೂಪನಾದ ಸ್ವಾಮಿಯ ಉಪಾಸನಾಕ್ರಮವನ್ನು ನಿರೂಪಿಸಿದ್ದಾರೆ.

೧೮. **ಬೃಹದಾರಣ್ಯಮೇವ ಚ –** ಈ ಉಪನಿಷತ್ತಿನಲ್ಲಿ ಭಗವಂತನ ನಾನಾ ಪ್ರಕಾರವಾದ ಉಪಾಸನಾ ಮಾರ್ಗಗಳನ್ನು ತಿಳಿಸಿದ್ದಾರೆ. ಇಲ್ಲಿ "ಅಹಂ ಬ್ರಹ್ಮಾಸ್ಮಿ" ಎಂಬ ವಾಕ್ಯವು ಭೇದಬೋಧಕವಾಗಿದೆ ಎಂದು ಅನೇಕ ಪ್ರಮಾಣಗಳನ್ನು ಉದಾಹರಿಸಿ ತಿಳಿಸಿದ್ದಾರೆ.

- ಪರಮಾತ್ಮನು ಅಹಂ ಅಹೇಯನು,
- ಬ್ರಹ್ಮ ಪರಿಪೂರ್ಣನು
- ಅಸ್ಮಿ ಯಾವಾಗಲೂ ಆಗಿದ್ದಾನೆ ಎಂದು ಶ್ರುತ್ಯರ್ಥವಾಗಿದೆ.

ಇದೇ ರೀತಿಯಲ್ಲಿ ಈ ವಾಕ್ಯದ ಅರ್ಥವನ್ನು ಮಾಡಬೇಕೆಂದು ತಿಳಿಸಲು ಅನೇಕ ಯುಕ್ತಿಗಳನ್ನೂ ಹಾಗು ಪ್ರಮಾಣಗಳನ್ನೂ ಉದಾಹರಿಸಿದ್ದಾರೆ. ಇದೇ ಸಂದರ್ಭದಲ್ಲಿ ತಾರತಮ್ಯವನ್ನು, ಚಾರ್ವಾಕಾದಿ ಪರಮತಗಳನ್ನು ಸವಿಸ್ತಾರವಾಗಿ ನಿರಾಕರಿಸಿ, ಸ್ಥಾಪಿಸಿದ್ದಾರೆ. **"ಉತ್ತಮಃ ಸರ್ವದೇವೇಶು ಪ್ರಾಣ ಏವ ದೃಶೇನು"** ಎಂದು ಪ್ರಮಾಣವನ್ನು ಉದ್ಧರಿಸಿ ವಾಯುಜೀವೋತ್ತಮತ್ವವನ್ನು ಸ್ಥಾಪಿಸಿದ್ದಾರೆ. ಭಾರದ್ವಾಜ, ವಸಿಷ್ಠಾದಿ ಋಷಿಗಳ ನಾಮಗಳನ್ನು ಶ್ರೀಹರಿಯಲ್ಲಿ ಸಮನ್ವಯಿಸಿ, ಮೈತ್ರೇಯಿ ಬ್ರಾಹ್ಮಣನಿಮಿತ್ತಕವಾಗಿ ಸ್ವರೂಪಾನಂದಾವಿಭಾವವು ಮೋಕ್ಷವೇ ಹೊರತು ಜೀವನಾಶವಲ್ಲವೆಂದು ತಿಳಿಸಿದ್ದಾರೆ.

- ಸರ್ವಜ್ಞನಾದ ಪರಮಾತ್ಮನು ಈ ಜಗತ್ತನ್ನು ತನ್ನಿಂದ ಭಿನ್ನವಾಗಿ ತಿಳಿಯುತ್ತಿದ್ದಾನ್ನಾದ್ದರಿಂದ ಈ ಸಮಸ್ತ ಪ್ರಪಂಚ ಸತ್ಯವಾಗಿದೆ.
- ಜ್ಞಾನಿಯು ಈ ದೇಹವನ್ನು ಬಿಡುವ ಕಾಲದಲ್ಲಿ ಮಾಡುವ ಅನುಸಂಧಾನಪ್ರಕಾರವನ್ನು ತಿಳಿಸಿದ್ದಾರೆ.
- ಶ್ರೀಹರಿಯ ಅನಂತರೂಪಗಳೂ, ಅನೇಕಾವತಾರಗಳೂ ಎಲ್ಲವೂ ಪರಿಪೂರ್ಣಾವಾಗಿವೆ.
- ವಾಮದೇವ ಉಪಾಸನಾ ಪ್ರಕಾರಗಳೂ ಇಲ್ಲಿ ನಿರೂಪಿತವಾಗಿದೆ.

### ೧೯. ಈಶಾವಾಸ್ಯಂ –

ಈ ಉಪನಿಷತ್ತಿನಲ್ಲಿ ಬ್ರಹ್ಮಜ್ಞಾನಕ್ಕೆ ಅಧಿಕಾರಿಗಳು, ಈ ಸಮಸ್ತ ಜಗತ್ತು ಶ್ರೀ ಹರಿಯ ಅಧೀನ.

ಆ ಭಗವಂತನಿಂದ ಪ್ರದತ್ತವಾದುದರಿಂದಲೇ ತೃಪ್ತನಾಗಿ ಶ್ರೀ ಸ್ವಾಮಿಯ ವ್ಯಾಪಾರಗಳನ್ನು ಮಾಡಬೇಕು.

ಜ್ಞಾನಿಗಳೂ, ಅಜ್ಞಾನಿಗಳೂ ಸಹ ವರ್ಣಾಶ್ರಮೋಚಿತವಾದ ಕರ್ಮಾನುಷ್ಠಾನವನ್ನು ಮಾಡಲೇಬೇಕೆಂದು ತಿಳಿಸಿದೆ. ಬ್ರಹ್ಮಜ್ಞಾನಿಯು ಇತರ ವೇದ ವಿರುದ್ಧವಾದಂತಹ ಮತಗಳನ್ನು ನಿರಾಕರಿಸಿ, ಸ್ವಮತವನ್ನು ಸ್ಥಾಪಿಸಲೇಬೇಕು. ಆವಾಗ ಭಾಗದ್ವಯಯುಕ್ತವಾದ ಮೋಕ್ಷವು ಪ್ರಾಪ್ತವಾಗುತ್ತದೆ.

ಬ್ರಹ್ಮನಿಗೆ ಸರ್ವಜ್ಞತ್ವ, ಪ್ರಕೃತ್ಯಾದಿ ಸರ್ವಪದಾರ್ಥ ನಿಯಾಮಕತ್ವ, ಸದಾ ಅನನ್ಯಾಶ್ರಯತ್ವ, ಇತ್ಯಾದಿ ಅನೇಕ ಗುಣಯುಕ್ತನಾದ ಶ್ರೀಹರಿಯು ಅನಾದಿ ಅನಂತ ಸಂವತ್ಸರಗಳಲ್ಲಿ ಸತ್ಯವಾದ ಪದಾರ್ಥಗಳನ್ನು ಸೃಷ್ಟಿಸುತ್ತಾನೆ.

ಸರ್ವಜೀವೋತ್ತಮರಾದ ಶ್ರೀ ಮುಖ್ಯಪ್ರಾಣರೂಪವಾದ ಪ್ರತಿಮೆಯಲ್ಲಿ ಸ್ವಾಮಿಯು ಇರುವನೆಂದು ತಿಳಿಯುವ ಸಲುವಾಗಿ ಆ ಮುಖ್ಯಪ್ರಾಣನಲ್ಲಿ ಸ್ವಾಮಿಯು ಇರುವಿಕೆಯನ್ನು ನಿರೂಪಿಸಿದೆ. ಶ್ರವಣಾದಿ ಸಾಧನೆ ಮಾಡಿದ ಜೀವನು ಶ್ರೀ ಹರಿಯ ಸಾಕ್ಷಾತ್ಕಾರವನ್ನೇ ಅಪೇಕ್ಷಿಸಬೇಕೆಂದು ತಿಳಿಸಿ ಉಪಸಂಹರಿಸಲಾಗಿದೆ.

೨೦. **ಕಾಠಕಂ –** ಬ್ರಹ್ಮವಿದ್ಯೆಯನ್ನು ಹೇಳಲು, ಅದನ್ನು ಕೇಳಲು ಜನರಿಗೆ ಆದರವನ್ನು ಹುಟ್ಟಿಸಲಿಕ್ಕೆ ಕಥಾರೂಪವಾಗಿ ನಚಿಕೇತ ಹಾಗೂ ಯಮನ ಸಂವಾದರೂಪದಿಂದ ಹೇಳುತ್ತಾನೆ ವೇದಪುರುಷನು.

ಉದ್ದಾಲಕನೆಂಬ ಋಷಿಯು ಸ್ವರ್ಗಪ್ರಾಪ್ತಿಯ ಉದ್ದೇಶದಿಂದ ಸರ್ವಸ್ವವನ್ನು ದಾನವಾಗಿ ಕೊಡುತ್ತಾನೆ. ಅವನ ಮಗನಾದ ನಚಿಕೇತನು, "ಅಪ್ಪನೇ, ಈ ಸತ್ವರಹಿತವಾದ, ಮುಪ್ಪಾದ ಗೋವುಗಳನ್ನು ಕೊಡತಕ್ಕವನು ಸುಖರಹಿತವಾದ ಲೋಕಗಳನ್ನು ಕುರಿತು ಹೋಗುತ್ತಾನೆ. ಹಾಗಾದರೆ ನನ್ನನ್ನು ಯಾರಿಗೆ ದಾನ ಕೊಡುವಿ" ಎಂದು ಕೇಳಲು ಕೋಪಗೊಂಡ ಋಷಿಗಳು "ನಿನ್ನನ್ನು ಯಮನಿಗೆ ಕೊಡುವೆ"ನೆಂದು ಹೇಳಿದರು. ಆಗ ಆ ನಚೀಕೇತನು ಯಮಲೋಕವನ್ನು ಕುರಿತು ಪ್ರಯಾಣ ಮಾಡಿದನು. ಯಮನ ಹೆಂಡತಿ ಬಾಲಕನನ್ನು ಕರೆಯಲು, ನಾನು ಯಮನು ಬರುವವರೆಗೂ ಒಳಗೆ ಬರುವುದಿಲ್ಲವೆಂದು ತಿಳಿಸಿ ಬಾಗಿಲಲ್ಲಿ ಕಾದು ಕುಳಿತನು. ಹಿಂತಿರುಗಿದ ಯಮನು ಮೂರು ವರಗಳನ್ನು ಕೇಳೆಂದು ಹೇಳಲು, ಆಗ ನಚಿಕೇತನ ಕೋರಿಕೆಯಂತೆ ಪರಮಾತ್ಮನ ಸಂಬಂಧದ ವಿಚಾರವನ್ನು ವಿಸ್ತಾರವಾಗಿ ತಿಳಿಸಿದ್ದಾನೆ.

- ಈ ಭಗವಂತನು ಕೇವಲ ತರ್ಕದಿಂದಾಗಲೀ ಹೊಂದಲು, ತಿಳಿಯಲು, ಸಾಧ್ಯವಿಲ್ಲ.
- ಈ ಸ್ವಾಮಿಯು ಧರ್ಮದಿಂದ, ಅಧರ್ಮದಿಂದ ಕಾರ್ಯಪದಾರ್ಥಗಳಿಂದ, ಕಾರಣಪದಾರ್ಥಗಳಿಂದ ಹಾಗೂ ಸರ್ವ ಪದಾರ್ಥಗಳಿಂದ ವಿಲಕ್ಷಣನಾಗಿದ್ದಾನೆ.

- ಎಲ್ಲ ವೇದಗಳೂ ಆ ಪರಮಾತ್ಮನ ಸ್ವರೂಪವನ್ನೇ ಪ್ರತಿಪಾದಿಸುತ್ತವೆ.
- ಈ ಶರೀರವು ನಾಶವಾದರೂ ಇದರಲ್ಲಿರುವ ಶ್ರೀ ಹರಿಯು ಶಾಶ್ವತನಾಗಿ ಜನನಾದಿ ರಹಿತನಾಗಿಯೂ ಇರುತ್ತಾನೆ.
- ಆಣುಪದಾರ್ಥಕ್ಕಿಂತಲೂ ಅಣುವಾಗಿ, ಮಹತ್ಪದಾರ್ಥಕಿಂತಲು ಮಹತ್ತಾಗಿಯೂ, ಕೂತವನೇ ದೂರದಲ್ಲಿ ಹೋಗುತ್ತಾನೆ, ಮಲಗಿದವನೇ ಸರ್ವತ್ರ ಇರುತ್ತಾನೆ  ಎಂಬುದಾಗಿ ಅನೇಕ ಶ್ರೀಹರಿಯ ಮಹಿಮೆಗಳನ್ನು ತಿಳಿಸಿದ್ದಾನೆ.
- ಈ ದೇಹವನ್ನು ರಥವೆಂದು ವಿವರಿಸಿ, ಅದರ ಉಪಾಸನಾಕ್ರಮವನ್ನೂ ನಿರೂಪಿಸಿದ್ದಾನೆ. ಭಗವಂತನ ರೂಪಗಳಿಗೆ ಭೇದವನ್ನು ನೋಡುವವನು ಅನರ್ಥವನ್ನು ಹೊಂದುತ್ತಾನೆಂದು ದೃಷ್ಟಾಂತಪೂರ್ವಕ ನಿರೂಪಿಸಿ, ಅಂಗುಷ್ಠ ಮಾತ್ರ ಸ್ವರೂಪನಾದ ಸ್ವಾಮಿ ಯಾವಾಗಲೂ ಸಜ್ಜನರ ಹೃದಯದಲ್ಲಿ ವಾಸಿಸುತ್ತಾನೆ.
- ಈ ರೀತಿಯ ಸ್ವಾಮಿಯ ಜ್ಞಾನದಿಂದಲೇ ಸಜ್ಜನರು ಮುಕ್ತರಾಗುತ್ತಾರೆಂದು ವಿಸ್ತಾರವಾಗಿ ನಿರೂಪಿಸಿರುವನು.

೨೧. **ಛಾಂದೋಗ್ಯ –** ಈ ಉಪನಿಷತ್ತಿನಲ್ಲಿ ಉದ್ಗೀತೋಪಾಸನೆಯನ್ನು ಮುಖ್ಯಪ್ರಾಣದ್ವಾರ ಮಾಡುವ ಕ್ರಮವು ನಿರೂಪಿತವಾಗಿದೆ.  ಮುಖ್ಯಪ್ರಾಣರು ಕಲಿಯ ಭಾದೆರಹಿತರೂ, ಶ್ರೀ ಹರಿಯ ಏಕಾಂತಭಕ್ತರೂ ಆದ್ದರಿಂದ ದೇವತೆಗಳು ಶ್ರೀ ಮುಖ್ಯಪ್ರಾಣರ ದ್ವಾರ ಉಪಾಸನೆಯನ್ನು ಮಾಡಿದಾಗೆ, ಆ ಅಸುರರು ನಿರಾಕೃತರಾದರು.  ಆದ್ದರಿಂದ ಜೀವೋತ್ತಮರು ಶ್ರೀ ಮುಖ್ಯಪ್ರಾಣರೆಂಬ ವಿಷಯವನ್ನು ಇಲ್ಲಿ ತಿಳಿಸಲಾಗಿದೆ.  ಶ್ರೀ ಹರಿಯಲ್ಲಿ ಸಾಮ, ಸ್ವರ, ಇತ್ಯಾದಿ ವಿಲಕ್ಷಣವಾದ ಶಬ್ದಗಳನ್ನು ಪ್ರಮಾಣ ವಾಕ್ಯಗಳನ್ನು ಉದಾಹರಿಸಿ ಸಮನ್ವಯ ಮಾಡಲಾಗಿದೆ.

**“ಸರ್ವಮಸ್ತಿ”** ಇತ್ಯುಪಾಸೀತ ಎಂಬ ವಾಕ್ಯವು

**ಅಸನಾನ್ನಿತಿರುಪತ್ವಾತ್ ಅಸ್ಮೀತ್ಯುಕ್ತ ಪರೋ ಹರಿ: ।**

**ತಂ ಸರ್ವಮಿತ್ಯುಪಾಸೀತ ಪೂರ್ಣಾತಾ ಸರ್ವತಾ ಸ್ಮೃತಾ॥**

ಎಂಬ ಪ್ರಮಾಣವಾಕ್ಯಕ್ಕೆ ಅನುಸರಿಸಿ ಶ್ರೀಹರಿಗೆ ಪೂರ್ಣತ್ವಬೋಧಕವೇ ಹೊರತು ಅಭೇದಬೋಧಕವಲ್ಲವೆಂದು ನಿರೂಪಿಸಿದ್ದಾರೆ. ಮಧುವಿದ್ಯೆಯ ಉಪಾಸನಾಪ್ರಕಾರವನ್ನು ನಿರೂಪಿಸಿದ್ದಾರೆ.

ಪೌತ್ರಾಯಣನು ಕ್ಷತ್ರಿಯನು, ಆದರೆ ಬಹು ದು:ಖದಿಂದ ಕೂಡಿದವನಾದ್ದರಿಂದ ಅವನನ್ನು ಪಕ್ಷಿಗಳು ಶೂದ್ರನೆಂದು ಕರೆದುವು. ಶ್ವೇತಕೇತು–ಉದ್ದಾಲಕರ ಸಂವಾದದಿಂದ **"ತತ್ತ್ವಮಸಿ"** ಎಂದು ಒಂಬತ್ತು ಸಾರಿ ಹೇಳಲ್ಪಟ್ಟಂಟಹ ವಾಕ್ಯಕ್ಕೆ ಉಪಕ್ರಮಾದಿ ನಿರ್ಣಾಯಕ ಯುಕ್ತಿಗಳಿಂದ ಭೇದಬೋಧಕತ್ವವಿದೆಯೇ ಹೊರತು ಅಭೇದಬೋಧಕತ್ವವಿಲ್ಲವೆಂದು ತಿಳಿಸಿ, ತಾರತಮ್ಯಪೂರ್ವಕವಾದ ಉಪಾಸನೆಯೇ ಮೋಕ್ಷಕ್ಕೆ ಮಾರ್ಗವೆಂಬ ವಿಷಯವನ್ನು ಸಹ ನಿರೂಪಿಸಲಾಗಿದೆ. ಹೃದ್ಗುಹಾಂತಸ್ಥನಾದ ಶ್ರೀಹರಿಯ ಮಹಿಮೆಯೂ ಸಹ ನಿರೂಪಿಸಲಾಗಿದೆ. ಮೋಕ್ಷದಲ್ಲಿ ಸಂಕಲ್ಪಮಾತ್ರದಿಂದಲೇ "ಆಯಾಸದ ಪ್ರಯತ್ನವಿಲ್ಲದ" ಸಕಲ ಪುರುಷಾರ್ಥಗಳೂ ಪ್ರಾಪ್ತವಾಗುತ್ತವೆ. ಈ ಮೋಕ್ಷದಿಂದ ಪುನ: ಸಂಸಾರಕ್ಕೆ ತಿರುಗಿಬರುವುದಿಲ್ಲವೆಂದು ನಿರೂಪಿಸಲಾಗಿದೆ.

## ೨೨. ಅರ್ಹರ್ವರ್ಣೇ ತಥಾ –

ಈ ಉಪನಿಷತ್ತಿನಲ್ಲಿ ವಿದ್ಯೆಗಳು ಪರ ಮತ್ತು ಅಪರ ಎಂದು ವಿಭಾಗಿಸಿ, ವೇದಾದಿಗಳು ಸಕಲವೂ ಅಪರವಿದ್ಯೆಯು. ಪರಮಾತ್ಮನನ್ನೇ ತಿಳಿಸತಕ್ಕ ವಿದ್ಯೆಯು ಪರವಿದ್ಯೆಯು ಅಂತಹ ಪರವಿದ್ಯೆಯಿಂದ ಪ್ರತಿಪಾದಿತನಾದ ಶ್ರೀಹರಿಯು ಬಾಹ್ಯವರ್ಣರಹಿತನೂ, ಬಾಹ್ಯಗೋತ್ರಾದಿ ವರ್ಜಿತನೂ, ಸರ್ವಗತನೂ, ಅತ್ಯಂತ ಸೂಕ್ಷ್ಮನೂ ಆಗಿದ್ದಾನೆಂದು ನಿರೂಪಿಸಿದೆ. ವಿಧಿಯನ್ನು ಬಹಿಷ್ಕರಿಸಿ ಅನುಷ್ಠಾನ ಮಾದಿದ ಕರ್ಮಗಳಿಂದ, ತತ್ಕಾಲದಲ್ಲಿ ಅನುಷ್ಠಾನ ಮಾಡದೇ ಇರುವ ಕರ್ಮಗಳಿಂದ ಭೂಲೋಕವನ್ನು ಆರಂಭಿಸಿ, ಸತ್ಯಲೋಕ ಪರ್ಯಂತರವಾಗಿ ಅಥವಾ ಭುವರ್ಲೋಕವನ್ನು ಆರಂಭಿಸಿ, ವೈಕುಂಠಲೋಕ ಪರ್ಯಂತರವಾಗಿ ಏಳು ಲೋಕಗಳು ನಾಶವಾಗುತ್ತವೆ. ಆದ್ದರಿಂದ ಈ ಸಕಲ ಲೋಕಗಳೂ ಕರ್ಮಪ್ರಾಪ್ಯವೆಂದು ತಿಳಿದು, ಅಲ್ಪ ಅಸ್ಥಿರ ಫಲದಾಯಕವೆಂದು ತಿಳಿದು, ಕರ್ಮಗಳಿಂದ ಮೋಕ್ಷವು ಸಾಧ್ಯವಿಲ್ಲವೆಂದು ತಿಳಿದು, ಬ್ರಹ್ಮನಿಷ್ಠನಾದ ಶ್ರೋತ್ರಿಯನಾದ ಗುರುಗಳಲ್ಲಿ, ವಿನಯಪೂರ್ವಕವಾಗಿ ಸಕಲ ಶಾಸ್ತ್ರಾರ್ಥವನ್ನು ಅಧ್ಯಯನ ಮಾಡಬೇಕು. ಪರಮಾತ್ಮನ ಅಂಗಗಳಿಂದ ದೇವತೆಗಳು ಸೃಷ್ಟರಾಗಿದ್ದಾರೆ.

ಯಾವಾತನಲ್ಲಿ ಈ ಸಮಸ್ತ ಚರಾಚರ ಪದಾರ್ಥಗಳೂ ಆಶ್ರಿತವಾಗಿದ್ದಾವೋ ಅಂತಹ ಆತ್ಮ ಶಬ್ದವಾಚ್ಯನಾದ ಶ್ರೀಹರಿಯಲ್ಲೇ ಸಕಲ ವೇದಾದಿಗಳಿಗೆ ತಾತ್ಪರ್ಯವು, ಮತ್ತು ಇಂತಹ ಮೋಕ್ಷಕ್ಕೆ ಸೇತುವಾದ ಶ್ರೀಹರಿಯ ಜ್ಞಾನದಿಂದಲೇ ಮುಕ್ತಿಯು ಎಂದು ನಿರೂಪಿಸಲಾಗಿದೆ.

**"ದ್ವಾ ಸುಪರ್ಣಾ"** ಎಂಬ ಮುಖ್ಯವಾದ ವಾಕ್ಯದಲ್ಲಿ ಶ್ರೀಹರಿ ಮತ್ತು ಜೀವರುಗಳಿಗೆ ಇರುವ ಪರಸ್ಪರ ವಿರುದ್ಧವಾದ ಧರ್ಮಗಳನ್ನು ಪ್ರತಿಪಾದಿಸಿ ಪಾರಮಾರ್ಥಿಕವಾದ ಭೇದವನ್ನೇ ತಿಳಿಸಿದೆ. ಭಗವಂತನ ಅಪರೋಕ್ಷ ಜ್ಞಾನದಿಂದಲೇ ಸಕಲಾಜ್ಞಾನಗಳೂ ನಾಶವಾಗಿ, ಪ್ರಾರಬ್ಧೇತರ ಕರ್ಮಗಳು ನಾಶವಾಗಿ ಸಕಲ ಪುರುಷಾರ್ಥಗಳೂ ಪ್ರಾಪ್ತವಾಗುತ್ತವೆ. ಇಂತಹ ಸ್ವಾಮಿಯ ಜ್ಞಾನದಿಂದ ಸಕಲ ದೋಷಗಳಿಂದ ರಹಿತನಾಗಿ ಈ ಜೀವ ಶ್ರೀಹರಿಯ ಪರಮ ಸಾಮ್ಯವನ್ನು ಹೊಂದುತ್ತಾನೆ. ಇಂತಹ ಜ್ಞಾನವು ಅಧ್ಯಯನಾದಿಗಳಿಂದ ಪ್ರಾಪ್ತವಾಗುವುದಿಲ್ಲ. ಮತ್ತು ಹರಿಭಕ್ತಿ, ಹಾಗೂ ಹರಿಭಕ್ತರಲ್ಲಿ ಮಾಡುವ ವಿಲಕ್ಷಣಾವಾದ ಭಕ್ತಿವಿಶೇಷ, ಸ್ವಸ್ವೋಚಿತವಾದ ಸತ್ಕರ್ಮಾನುಷ್ಠಾನದಿಂದಲೇ ಪ್ರಾಪ್ತವಾಗುತ್ತದೆಂದು ನಿರೂಪಿಸಲಾಗಿದೆ.

## ೨೩. **ಮಾಂಡೂಕ್ಯಂ ನಾಮ** –

ಇಲ್ಲಿ ಸಮಸ್ತ ವ್ಯಸ್ತ ಪ್ರಣವಪ್ರತಿಪಾದ್ಯನಾದ ಭಗವಂತನ ಉಪಾಸನಾ ಪ್ರಕಾರವನ್ನು ನಿರೂಪಿಸಿದ್ದಾರೆ. ಯಾವ ಸಮಸ್ತ ಜಗತ್ತು ಶ್ರೀಹರಿಯಲ್ಲಿ ಆಶ್ರಿತವಾಗಿದೆ. ಆದ್ದರಿಂದ **"ಓಂ"** ಶಬ್ದವು ಶ್ರೀಹರಿಯನ್ನು ಪ್ರತಿಪಾದಿಸುತ್ತದೆ. ಈ ನಾರಾಯಣನು ಎಲ್ಲಾ ಕಾಲದಲ್ಲಿಯೂ ಏಕಪ್ರಕಾರವಾಗಿ ಇರುತ್ತಾನೆ. ಆದ್ದರಿಂದ ಅಕ್ಷರನು ಮತ್ತು ಪರಿಪೂರ್ಣನು ಎಂದು ಉಪಪಾದನೆ ಮಾಡಿದೆ. ಈ ಓಂಕಾರದಲ್ಲಿ ಅಕಾರ, ಉಕಾರ, ಮಕಾರ ಮತ್ತು ನಾದಗಳಿವೆ. ಅಕಾರ ಪ್ರತಿಪಾದ್ಯನಾದ ಹರಿಯು ಚಕ್ಷುರಿಂದ್ರಿಯವೇ ಸ್ಥಾನವಾಗಿ, ಬಹಿಪ್ರಜ್ಞನಾಗಿ, ಸಪ್ತಾಂಗನಾಗಿ, ಹತ್ತೊಂಬತ್ತು ಮುಖಗಳಿಂದ ಕೂಡಿದವನಾಗಿ (ಮಧ್ಯದ ಮುಖ ಗಜಾಕಾರ), ಶುಭಭೋಕ್ತನಾಗಿ, ವೈಶ್ವಾನರನು ಪ್ರಥಮ ಪಾದವು. ಉಕಾರವಾಚ್ಯವಾದ, ಕಂಠಸ್ಥಾನವಾದ, ಅಂತಃಪ್ರಜ್ಞನಾದ ಸಪ್ತಾಂಗಃ ಹತ್ತೊಂಬತ್ತು ಮುಖಗಳುಳ್ಳ ಸ್ವಪ್ನಾರ್ಥಗಳನ್ನು ಭೋಗಿಸತಕ್ಕ ತೈಜಸನು ದ್ವಿತೀಯ ಪಾದವು. ಮಕಾರವಾಚ್ಯನಾದ, ಅಜ್ಞಾನಾವೃತವಾಗಿ ಸುಷುಪ್ತಿಸ್ಥಾನನಾದ (ಸು–ಸುಖರೂಪನಾದ ಹರಿಯನ್ನು ಹೊಂದುವ), ಪ್ರಜ್ಞಾನಘನನಾದ, ಆನಂದಮಯನಾದ, ಆನಂದವನ್ನು ಭೋಗಿಸತಕ್ಕಂತಹ ಚಿನ್ಮುಖ (ಸಮಸ್ತ ಅವಯುವಗಳೂ ಜ್ಞಾನಾನಂದಾತ್ಮಕನಾದ) ಪ್ರಾಜ್ಞನು ತೃತೀಯ ಪಾದವು. ನಾದಪ್ರತಿಪಾದ್ಯವಾದ ತುರೀಯರೂಪವು ಮುಕ್ತರುಗಳಿಗೆ ಸ್ವಸ್ವಯೋಗ್ಯವಾದ ಆನಂದಾದಿಪ್ರದವೂ, ವಿಷ್ವಾದಿಗಳಂತೆ ಜಾಗ್ರತಾದಿ ಯುಕ್ತಿಗಳಿಂದ ತಿಳಿಯಲು ಅಶಕ್ಯವಾದುದೂ, ಅಚಿಂತ್ಯಾದಿ ಗುಣಗಳುಳದೂ ಆಗಿದೆ ಎಂದು ನಿರೂಪಿಸಿದೆ. ಕೇವಲ ಇಚ್ಛಾವಿಶೇಷದಿಂದಲೇ ಈ ಜಗತ್ತು ಪರಿಪೂರ್ಣನಾದ ಆಪ್ತಕಾಮನಾದ ಶ್ರೀಹರಿಯಿಂದ ಸೃಷ್ಠವಾಗಿದೆ.

ಈ ರೀತಿಯಾದ ಓಂಕಾರ(ಪ್ರಣವ)ದ ಉಪಾಸನೆಯಿಂದಲೇ ಮೋಕ್ಷಾದಿ ಪುರುಷಾರ್ಥಗಳು ಸಾಧ್ಯವೆಂದು ತಿಳಿಸಿದೆ.

24. **ಷಟ್ ಪ್ರಶ್ನವ್** – ಸುಕೇಶ, ಸತ್ಯಕಾಮ, ಸೌರ್ಯಾಯಣಿ, ಅಶ್ವಲಾಯನ, ವೈದರ್ಭೀ, ಕಬಂಧೀ ಎಂಬ ಆರು ಋಷಿಗಳು ಹೆಚ್ಚಿನ ಬ್ರಹ್ಮಜ್ಞಾನಕ್ಕೆ ಪಿಪ್ಪಲಾದ ಎಂಬ ಋಷಿಗಳಲ್ಲಿ ಒಂದು ವರ್ಷ ಪರ್ಯಂತರವಾಗಿ ಬ್ರಹ್ಮಚರ್ಯವನ್ನು ಅನುಷ್ಠಾನ ಮಾಡಿ, ಒಬ್ಬೊಬ್ಬರೂ ಒಂದೊಂದು ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆದ ಉಪನಿಷತ್ತೇ – **ಷಟ್ ಪ್ರಶ್ನೋಪನಿಷತ್**

**೧.ಕಬಂಧೀ** – ಯಾರ ನಿಮಿತ್ತಕವಾಗಿ ಈ ದೇವತೆಗಳೇ ಮೊದಲಾದ ಪ್ರಜೆಗಳು ಉತ್ಪನ್ನರಾಗುತ್ತಾರೆ?

ಉತ್ತರ – "ಅವ್ಯಕ್ತಸ್ವಭಾವನಾದ ಶ್ರೀ ಹರಿ, ಮುಖ್ಯಪ್ರಾಣಾದಿಗಳಲ್ಲಿ ಪ್ರವೇಶ ಮಾಡಿ, ಅವರುಗಳನ್ನು ನಿಮಿತ್ತ ಮಾಡಿಕೊಂಡು ಈ ಸಕಲ ಪ್ರಜೆಗಳನ್ನು ಸೃಷ್ಟಿಸುತ್ತಾನೆ" ಎಂದರು.

**೨.ವೈದರ್ಭೀ** – ಇವರುಗಳಲ್ಲಿ ಶ್ರೇಷ್ಟರು ಯಾರು?

ಉತ್ತರ – "ತಾರತಮ್ಯವನ್ನು ಪ್ರದರ್ಶಿಸುತ್ತಾ, ಮುಖ್ಯಪ್ರಾಣದೇವರ ಉತ್ತಮತ್ತ್ವವನ್ನು" ಸ್ಥಾಪಿಸಿದ್ದಾರೆ.

೩.**ಅಶ್ವಲಾಯನ** – ಈ ಮುಖ್ಯಪ್ರಾಣನು ಯಾರಿಂದ ಉತ್ಪನ್ನನಾಗುತ್ತಾನೆ?

ಉತ್ತರ – ಭಗವಂತನು ಈತನ ಸೃಷ್ಟಿಯನ್ನು ಮಾಡುತ್ತಾನೆಂದು ಉತ್ತರಿಸಿದ್ದಾರೆ.

೪.**ಸೌರ್ಯಾಯಣಿ–** ಯಾವಾಗ ಶ್ರೀಹರಿಯ ಅಧೀನ?

ಉತ್ತರ – ಈ ದೇವತೆಗಳು ಕೇವಲ ಜಾಗ್ರತಾವಸ್ಥೆಯಲ್ಲಿ ಮಾತ್ರವಲ್ಲ, ಸ್ವಪ್ನ ಮತ್ತು ಸುಷುಪ್ತಿ ಅವಸ್ಥೆಗಳಲ್ಲೂ ಶ್ರೀಹರಿಯ ಅಧೀನವೆಂದು ತಿಳಿಸಿರುತ್ತಾರೆ.

೫.ಸತ್ಯಕಾಮ – ಇಂತಹ ಸ್ವಾಮಿಯನ್ನೂ ಯಾವ ವೇದಗಳಿಂದ ಉಪಾಸನಾ ಮಾಡಬೇಕು?

ಉತ್ತರ – ಯೋಗ್ಯತೆಗನುಸಾರವಾಗಿ ಶ್ರೀಹರಿಯ ಜ್ಞಾನವನ್ನು ಮಾಡಿಕೊಂಡು ಪ್ರಣವಾದಿಗಳ ಉಪಾಸನೆಯಿಂದ ಈ ಸಂಸಾರದ ಮುಕ್ತಿ ಎಂದು ತಿಳಿಸಿರುತ್ತಾರೆ.

೬. ಸುಕೇಶರ ಪ್ರಶ್ನೆಗೆ ಉತ್ತರಿಸುತ್ತಾ, ಸ್ವಾಮಿಯು ಕೇವಲ ಸಂಶಾರಾವಸ್ಥೆಯಲ್ಲಿ ಮಾತ್ರ ನಿಯಾಮಕನೆಂದು ಭಾವಿಸಬಾರದು. ಮೋಕ್ಷದಲ್ಲೂ ಸಹ ಈ ಸಮಸ್ತ ದೇವತೆಗಳೂ, ಜೀವರುಗಳೂ ಶ್ರೀಹರಿಯ ಅಧೀನರಾಗಿದ್ದಾರೆಂದು ತಿಳಿಸಿ, ಷೋಡಶ ಕಲೆಗಳ ವಿಚಾರವನ್ನು ತಿಳಿಸಿ ವಿಷಯವನ್ನು ಉಪಸಂಹರಿಸಿದ್ದಾರೆ.

## ೨೫. ತಥಾ ತಲವಕಾರಕಮ್ ಚಕ್ರೇ ಭಾಷ್ಯಾನಿ ದಿವ್ಯಾನಿ ದಶೋಪನಿಷದಾಂ ಗುರು: ॥

ಜ್ಞಾನಿಗಳಾದಿ ಶ್ರೀ ಮಹರುದ್ರದೇವರು, ಬ್ರಹ್ಮದೇವರನ್ನು ಪ್ರಶ್ನಿಸಿದಾಗ ಉತ್ತರಿಸಿದ ಗ್ರಂಥವೇ ಈ ಉಪನಿಷತ್ತು, ಯೋಗ್ಯಾಯೋಗ್ಯಾ ವಿಷಯಗಳಲ್ಲಿ ಈ ಮನಸ್ಸನ್ನು ಪ್ರೇರಿಸುವವರು ಯಾರು, ಸರ್ವಜೀವೋತ್ತಮರಾದ ಮುಖ್ಯಪ್ರಾಣದೇವರನ್ನು, ಇಂದ್ರಿಯಾಭಿಮಾನಿಗಳನ್ನು ಪ್ರೇರಿಸುವವರು ಯಾರು ಎಂದು ಪ್ರಶ್ನಿಸಿದಾಗ, ಬ್ರಹ್ಮದೇವರು ಯಾವ ಶ್ರೀಹರಿಯು ಇಂದ್ರಿಯಾದಿಗಳಿಂದ ಪೂರ್ಣವಾಗಿ ತಿಳಿಯಲಿಕ್ಕೆ ಸಾಧ್ಯವಿಲ್ಲವೋ ಅಂತಹ ಸ್ವಾಮಿಯೇ ಎಲ್ಲರಿಗೂ ಪ್ರೇರಕನು. ಅವನು ಜೀವನಿಂದ ಅತ್ಯಂತ ಭಿನ್ನನು, ಅವ್ಯಕ್ತ ಸ್ವಭಾವವುಳ್ಳವನು. ಇಂತಹ ಸ್ವಾಮಿಯನ್ನು ಬ್ರಹ್ಮಜ್ಞಾನಿಗಳೂ ಪೂರ್ಣವಾಗಿ ತಿಳಿದಿಲ್ಲ. ನಾನೂ ಸಹ ಈ ಹರಿಯನ್ನು ಸರಿಯಾಗಿ ತಿಳಿದಿಲ್ಲವೆಂದು ತಿಳಿಸಿದ್ದಾರೆ.

ಈ ವಿಷಯವನ್ನು ಸ್ಥಾಪಿಸಲಿಕ್ಕ ಅಹಂಕಾರಯುಕ್ತ ದೇವತೆಗಳಿಗೆ ಜ್ಞಾನವಾಗಲಿಕ್ಕೆ, ಯಕ್ಷರೂಪದಿಂದ ಪ್ರಾದುರ್ಭಾವನಾಗಿ, ಅಗ್ನಿ, ನಾಸಿಕ್ಯವಾಯು ಇವರುಗಳ ಶಕ್ತಿಯನ್ನು ಪರೀಕ್ಷಿಸಿ, ಅವರುಗಳಿಗೆ ಜ್ಞಾನವಾಗದೇ ಇದ್ದಾಗ, ಅವರುಗಳಿಗೆ ಸಾಕ್ಷಾತ್ತಾಗಿ ಹರಿಯ ಮುಖದಿಂದ ತಿಳಿಯಲು ಯೋಗ್ಯತೆಯಿಲ್ಲದಾಗ, ಉಮಾರೂಪದಿಂದ ಬಂದು ಇಂದ್ರದೇವರಿಗೆ ಸಕಲ ವಿಷಯಗಳನ್ನೂ ತಿಳಿಸಿ, ಸ್ವಾಮಿಯ ಸರ್ವಪ್ರೇರಕತ್ವ ಈ ಜ್ಞಾನಕ್ಕೆ ಮೋಕ್ಷಕ್ಕೆ ಕಾರಣವೆಂದು ತಿಳಿಸಿದ್ದಾರೆ.

## ೨೬. ನಿರ್ಣಯಂ ಸರ್ವಶಾಸ್ತ್ರಾಣಿ ಗೀತಾ ತಾತ್ಪರ್ಯ ನಿರ್ಣಯಮ್

ಶ್ರೀಭಗವದ್ಗೀತೆಯು ಭೇದ ಹಾಗೂ ಶ್ರೀಹರಿಯ ಸರ್ವೋತ್ತಮತ್ವವನ್ನೇ ಪ್ರತಿಪಾದಿಸುತ್ತದೆಂದು ಶ್ರೀ ಆಚಾರ್ಯರು ಭಗವದ್ಗೀತಾ ವಾಕ್ಯಗಳಿಂದಲೇ ಪ್ರತಿಪಾದಿಸಿ, ಗೀತೆಯು ಬಹು ಅರ್ಥಗಳನ್ನು ಪ್ರತಿಪಾದಿಸುತ್ತದೆ ಎಂಬ ಉಕ್ತಿಗೆ ಅನುಸಾರವಾಗಿ ವಿಲಕ್ಷಣವಾದ ವಿಷಯಗಳನ್ನು ಪ್ರಮಾಣಪೂರ್ವಕವಾಗಿ ಉದಾಹರಿಸಿದ್ದಾರೆ.

ಭಗವಂತನ ಸ್ವರೂಪದ ವಿಚಾರ, ಜೀವತ್ರೈವಿಧ್ಯ, ಸಾಧನತಾರತಮ್ಯ, ಜಗತ್ತಿಗೆ ಸತ್ಯತ್ವ, ನಿರ್ವಿಶೇಷ ಬ್ರಹ್ಮಸ್ವರೂಪದ ನಿರಾಕರಣೆ, ಜಗನ್ಮಿತ್ಯಥ್ವದ ನಿರಾಕರಣೆ, ಸರ್ವರಿಗೂ ಮೋಕ್ಷಪ್ರಾಪ್ತಿ ಎಂಬ ವಾದದ ನಿರಾಕರಣೆ, ವರ್ಣಾಶ್ರಮಗಳ ಸ್ವರೂಪವಿಚಾರ, ಸ್ತ್ರೀಪುರುಷರ ವಿಚಾರ, ನಿಷ್ಕಾಮ ಕರ್ಮಾನುಷ್ಠಾನದ ಅತ್ಯಂತಾವಶ್ಯಕತೆ, ಉಪಾಸನಾದಿಗಳ ವಿಚಾರ, ಅಪರೋಕ್ಷ ಜ್ಞಾನಿಗಳ ವಿಲಕ್ಷಣವಾದ ಲಕ್ಷಣಾದಿಗಳು, ಮುಕ್ತೇಶ್ವರರಿಗೂ ಭೇದವು, ಮುಕ್ತರಿಗೂ ಸಹ ವಿಲಕ್ಷಣವಾದ ಅಪ್ರಾಕೃತವಾದ ದೇಹವು ಇದೆ ಎಂಬ ನಾನಾ ವಿಷಯಗಳನ್ನು ಅನೇಕ ಶೃತಿ-ಸ್ಮೃತಿಗಳನ್ನು ಉದಾಹರಿಸಿ ತೋರಿಸಿದ್ದಾರೆ. ಅದ್ವೈತಪರವಾಗಿ ಅಪಾತತವಾಗಿ ತೋರುವ ನಾನಾ ವಾಕ್ಯಗಳನ್ನು ಅನೇಕ ಸಜಾತೀಯವಾದ ವಾಕ್ಯಗಳನ್ನು ಉದಾಹರಿಸಿ ಭೇದಪರವಾಗಿ ವ್ಯವಸ್ಥೆ ಮಾಡಿದ್ದಾರೆ.

ಕರ್ಮಸನ್ಯಾಸವೆಂದರೆ ಸರ್ವಥಾ ಕರ್ಮಗಳನ್ನು ಪರಿತ್ಯಾಗ ಮಾಡುವುದು ಎಂಬ ಪರವಾದಿಗಳ ವಿಷಯವನ್ನು ಇದು ಅಸಂಭಾವಿತವೆಂದು ಸ್ಪಷ್ಟವಾದ ಗೀತೆಯ ವಾಕ್ಯಗಳಿಂದ ಸಮರ್ಥಿಸಿ ಶ್ರೀಹರಿಯ ಕರ್ತೃತ್ವಾನುಸಂಧಾನಪೂರ್ವಕವಾಗಿ ನಿಷ್ಕಾಮ ಕರ್ಮಾನುಷ್ಠಾನವೇ ಎಂದು ನಿರೂಪಿಸಿದ್ದಾರೆ. ಮಕ್ಕಳಿಂದ ತಂದೆಯು ಮಾಡಿಸುವ ವಂದನೆಯಂತೆ ಸ್ವಾಮಿಯು ಈ ಜೀವನಿಂದ ಕಾರ್ಯ ಮಾಡಿಸುತ್ತಾನೆ. ಈ ಕರ್ತೃತ್ವವೇ ಜೀವನಿಗೆ ಇದೆ ಎಂದು ಸಪ್ರಮಾಣವಾಗಿ ಸಾರಿದ್ದಾರೆ. ಈ ಗೀತೆಯು ಎಲ್ಲಿಯೂ ಸಹ ಹಿಂದೆ ಹೇಳಿದ ವಿಷಯವನ್ನೇ ಪುನ: ಹೇಳುವುದಿಲ್ಲ. ಹಾಗೆ ತೋರುವ ವಾಕ್ಯಗಳಿಗೆ ವಿಶೇಷಾರ್ಥವುಂಟೆಂದು ನಿರೂಪಿಸಿದ್ದಾರೆ. ಸಾಕ್ಷಿಯ ಪ್ರಾಮಾಣ್ಯವನ್ನು ಮನೋಹರವಾಗಿ ನಿರೂಪಿಸಿ ವಿಶೇಷದ ಸ್ವರೂಪವನ್ನು, ಅದರ ಸಮರ್ಥನೆಯನ್ನು, ಪ್ರಮಾಣಪೂರ್ವಕವಾಗಿ ತೋರಿಸಿಕೊಟ್ಟಿದ್ದಾರೆ. ಇಲ್ಲಿ ಶಬ್ದನಿರ್ಣಯಕೋಶಾದಿಗಳನ್ನು ತೋರಿಸಿ ತಮ್ಮ ಸಾರ್ವಜ್ಞವನ್ನು ಪ್ರಕಟಿಸಿದ್ದಾರೆ. ಈ ರೀತಿ ವಿಲಕ್ಷಣವಾದ ಗ್ರಂಥವು ಇದು.

## ೨೭. **ಸನ್ನ್ಯಾಯವಿವೃತಿಂ ನಾಮ ನ್ಯಾಯಶಾಸ್ತ್ರನಿಕೃಂತನಮ್** –

ಬ್ರಹ್ಮಸೂತ್ರಗಳ ಮೇಲೆ ಶ್ರೀಮಧ್ವರಿಂದ ರಚಿತವಾದ ವಿಲಕ್ಷಣವಾದ ಗ್ರಂಥವು ಇದು. ಇಲ್ಲಿ ಬ್ರಹ್ಮಸೂತ್ರಗಳಲ್ಲಿ ಅಧಿಕರಣವನ್ನು ರಚಿಸುವಾಗ ಯಾವ ಯುಕ್ತಿಯು ಪೂರ್ವಪಕ್ಷಸೂಚಕವಾಗಿದೆ, ಸಿದ್ಧಾಂತವನ್ನು ಸ್ಥಾಪಿಸುವ ಯುಕ್ತಿಯು ಹೇಗೆ ಇದೆ, ಎಂಬುದನ್ನು ಆಚಾರ್ಯರು ನಿರೂಪಿಸಿದ್ದಾರೆ. ಅನುವ್ಯಾಖ್ಯಾನದಲ್ಲಿ ಶ್ಲೋಕರೂಪದಿಂದ ಸಂಕ್ಷೇಪವಾಗಿ ನಿರೂಪಿಸಿರುವ ಯುಕ್ತಿಗಳನ್ನು ಶಿಷ್ಯರಿಂದ ಪ್ರಾರ್ಥಿತರಾಗಿ ಸವಿಸ್ತಾರವಾಗಿ ವಿವರಿಸಿದ್ದಾರೆ. ಈ ಗ್ರಂಥದ ವಿಶೇಷವೆಂದು ಈ ಪೂರ್ವಪಕ್ಷದ

ಯುಕ್ತಿಗಳಾಗಲೀ, ಸಿದ್ಧಾಂತ ಯುಕ್ತಿಗಳಾಗಲೀ ಸೂತ್ರದ ಶಬ್ದಗಳಿಂದ ಸೂಚಿತವಾಗಿದೆ ಎಂದು ಮನೋಹರವಾಗಿ ನಿರೂಪಿಸಿದ್ದಾರೆ. ಉಪಕ್ರಮ, ಉಪಸಂಹಾರಗಳ ಮಧ್ಯದಲ್ಲಿ ಉಪಸಂಹಾರದ ಪ್ರಾಬಲ್ಯವನ್ನು ಬಿಂಬ-ಪ್ರತಿಬಿಂಬ ಒಂದೇ ಆಗಿದ್ದರೂ ಸಹ ಉಪಾದಿ ವೈಲಕ್ಷಣ್ಯವಾಗಿ ಪ್ರತಿಬಿಂಬಗಳಲ್ಲಿ ವೈಲಕ್ಷಣ್ಯವನ್ನು ಸೂತ್ರಗಳ ವಿನ್ಯಾಸಕ್ರಮವನ್ನು ನಿರುಪಿಸಿದ್ದಾರೆ. ಈ ಗ್ರಂಥವು ತರ್ಕಬದ್ಧವಾಗಿ ಮನೋಹರವಾಗಿದೆ.

## ೨೮. ನರಸಿಂಹ ನಖಸ್ತೋತ್ರಮ್ –

ಶ್ರೀ ತ್ರಿವಿಕ್ರಮಪಂಡಿತಾಚಾರ್ಯರು ಶ್ರೀಮದಾಚಾರ್ಯರು ಪೂಜಿಸುವ ಮೂರ್ತಿತ್ರಯಗಳನ್ನು ಹಾಗೂ ಶ್ರೀ ಮದಾಚಾರ್ಯರ ಅವತಾರತ್ರಯವನ್ನು ಏಕಾಂತದಲ್ಲಿ ಕಂಡಾಗ ಶ್ರೀಹರಿ ಹಾಗೂ ವಾಯುದೇವರ ರೂಪಗಳನ್ನು ವರ್ಣಿಸುವ ಮತ್ತು ಸ್ವಾಮಿಯ ಸರ್ವೋತ್ತಮತ್ವವನ್ನು ತಿಳಿಸುವ, ಶ್ರೀ ರಮಾದೇವಿಯರಿಂದಲೂ ಅಗಮ್ಯವಾದ ಮಹಿಮೆಯನ್ನು ತಿಳಿಸುವ ಶ್ಲೋಕದ್ವಯವನ್ನು ರಚಿಸಿ, ಶ್ರೀಹರಿವಾಯುಸ್ತುತಿಯು ಪ್ರಾಮಾಣಿಕವೆಂದು ತಿಳಿಸಿದ್ದಾರೆ.

## ೨೯. ಚಕ್ರೇ ಯುಮಕಭಾರತಮ್ –

ಭಾರತಗ್ರಂಥದ ಸಾರರೂಪವಾಗಿ, ಅತ್ಯಂತ ಕಠಿಣಮಯ ಯಮಕದಿಂದ (ಒಂದೇ ರೀತಿಯ ಶಬ್ದಗಳು) ಕೂಡಿದ ಎಂಬತ್ತು ಶ್ಲೋಕತ್ಮಕವಾದ ಗ್ರಂಥವೇ "ಯಮಕ ಭಾರತಮ್". ಇಲ್ಲಿ ಆದಿಯಲ್ಲಿ ಶ್ರೀಕೃಷ್ಣಪರಮಾತ್ಮನ ಜನ್ಮಾರಭ್ಯ ಚರಿತ್ರೆಗಳನ್ನು, ಶ್ರೀಕೃಷ್ಣ ಭಕ್ತರಾದ ಪಾಂಡವರ ಚರಿತ್ರೆಗಳನ್ನು, ದಶಾವತಾರಗಳನ್ನು ನಿರೂಪಿಸಲಾಗಿದೆ. ಇಲ್ಲಿ ನಾನಾ ಪ್ರಕಾರವಾದ ಯಮಕಗಳಲ್ಲಿ ಜಗತ್ತಿನಲ್ಲಿ ರೂಢಿಯಲ್ಲಿರುವ ಹಾಗೂ ಅತ್ಯಂತ ಅಪರುಪವಾದ ನಾನ ಯಮಕಗಳನ್ನು ರಚಿಸಿದ್ದಾರೆ. ಆದಿಯಮಕ, ಮಧ್ಯಯಮಕ, ಅಂತ್ಯಯಮಕ, ಪೂರ್ಣಯಮಕ, ಶ್ಲೋಕವನ್ನು ಹಿಂದೆ ಹೇಳಿ ಅರ್ಥವನ್ನು ಮಾಡುವ ಕ್ರಮ ಹಾಗೂ ಪಾದಯಮಕಗಳನ್ನು ತಿಳಿಸಿದ್ದಾರೆ.

**ರಾಮ ರಾಮ ಮಹಾಬಾಹೋ ಮಾಯಾ ತೇ ಸುದುರಾಸದಾ ।**

**ವಾದ ಸಾದದ ಕೋಲೋಕೇ ಪಾದಾವೇವ ತವಾऽಸಜೇತ್ ॥**

ಎಂಬ ಶ್ಲೋಕವನ್ನು ದಶಾವತಾರ ಪರವಾಗಿ ಹಾಗೂ ಇದೇ ಶ್ಲೋಕವನ್ನು ಹಿಂದೆ ಪಠಿಸಿದರೂ ಅರ್ಥವಾಗುವ ವಿಶಿಷ್ಟವಾದ ಶೈಲಿಯನ್ನು ಶ್ರೀಮಧ್ವರು ಅಳವಡಿಸಿಕೊಟ್ಟಂತಹ ಒಂದು ಕೊಡುಗೆ.

## ೩೦. **ದ್ವಾದಶಸ್ತೋತ್ರಮ್** –

ಶ್ರೀಕೃಷ್ಣನ ಪರಮ ಸುಂದರವಾದ ಪರಮ ಪವಿತ್ರವಾದ ವಿಗ್ರಹವನ್ನು ಕೈಲಿ ಹಿಡಿದುಕೊಂಡು ಬರುವಾಗ ಮಾಡಿದ ಸಕಲ ಶಾಸ್ತ್ರದ ಅರ್ಥವನ್ನು ತಿಳಿಸುವ ಗ್ರಂಥವೇ ಇದು. ಮೊದಲು ಪಾದದಿಂದ ಆರಂಭಿಸಿ, ಶಿರ:ಪರ್ಯಂತರವಾಗಿ ಭಗವಂತನ ಅವಯವಗಳನ್ನು ಪ್ರಮಾಣಸಮ್ಮತ್ವಾಗಿ ವರ್ಣಿಸಿದ್ದಾರೆ. ಪರಮಾತ್ಮನಲ್ಲಿ ಭಕ್ತಿಗೆ ಕಾರಣವಾದ ಶ್ರೀಹರಿಯ ಮಹಾಮಹಿಮೆಗಳನ್ನು ವರ್ಣಿಸಿ, ಸಾಧಕನಾದ ಜೀವ ಯಾವ ರೀತಿ ಸಾಧನೆಯನ್ನು ಮಾಡಬೇಕು, ಅನುಷ್ಠಾನಕಾಲದಲ್ಲಿ ಯಾವ ರೀತಿಯಿಂದ ಅನುಸಂಧಾನವಿರಬೇಕು ಎಂಬುದನ್ನು ತಿಳಿಸಿದ್ದಾರೆ. ದಶಾವತಾರದ ಸ್ತೋತ್ರವನ್ನು ಮಾಡಿ, ಕೇಶವಾದಿ ಚತುರ್ವಿಂಶತಿ ರೂಪಗಳನ್ನು ವರ್ಣಿಸಿದ್ದಾರೆ. ಶ್ರೀ ರಮಾದೇವಿಯರ ಮಹಿಮೆಯನ್ನು ತಿಳಿಸುವ ಕ್ರಮ ವಿಲಕ್ಷಣವಾಗಿದೆ. ಶ್ರೀ ಹರಿಯ ಅಸ್ತಿತ್ವವನ್ನು ಸ್ಥಾಪಿಸುವ ತರ್ಕಬದ್ಧವಾದ **"ಯದಿ ನಾಮ ಪರೋ ನ ಭವೇತ್ ಹರಿ:"** ಎಂಬ ಉಕ್ತಿ ಅತ್ಯಂತ ರಮಣೀಯವಾಗಿ ತಿಳಿಸಿ, ಮೋಕ್ಷದಲ್ಲಿಯೂ ಶ್ರೀಹರಿ ಹಾಗೂ ಜೀವರುಗಳಿಗೆ ತಾರತಮ್ಯವು ಇರುತ್ತದೆ ಎಂಬುದನ್ನು ವ್ಯಾವಹಾರಿಕ ಭೇದವೇ ಜಗತ್ತಿನಲ್ಲಿ ಎಂಬ ಅದ್ವೈತಿಗಳ ವಾದವನ್ನು ನಿರಾಕರಿಸುವ ಕ್ರಮ ಬಹಳ ಸುಂದರವಾಗಿದೆ. ಶ್ರೀ ಹರಿ ಆನಂದಸ್ವರೂಪವೆಂಬ ಉಪಾಸನೆಯು ಅತ್ಯಂತ ಅವಶ್ಯಕವೆಂದು ತಿಳಿಸುತ್ತಾ ಈ ಗ್ರಂಥವನ್ನು ಉಪಸಂಹರಿಸಿದ್ದಾರೆ.

## ೩೧. **ಅಕರೋತ್ ಕೃಷ್ಣಾಮೃತಮಹಾರ್ಣವಮ್** –

ಸಂಸಾರದು:ಖದಲ್ಲಿ ತಪ್ತರಾದ ಜೀವರಿಗೆ ಅತ್ಯಂತ ಸುಗಮವಾಗಿ ಈ ಸಂಸಾರ ದಾಟುವ ಮಾರ್ಗವನ್ನು ತಿಳಿಸುವ ಗ್ರಂಥವೇ "ಕೃಷ್ಣಾಮೃತಮಹಾರ್ಣವಮ್". ಇಲ್ಲಿ ಅನೇಕ ಪುರಾಣಗಳಲ್ಲಿರುವ ರುದ್ರಾದಿ

ದೇವತೆಗಳ, ಋಷಿಗಳ ವಾಕ್ಯಗಳನ್ನು ಉದಾಹರಿಸಿ, ಶ್ರೀಹರಿಯ ಸರ್ವೋತ್ತಮತ್ವವನ್ನು ಸ್ಥಾಪಿಸಿದ್ದಾರೆ. ಶ್ರೀ ಹರಿಗೆ ಮಾಡುವ ಸಾಷ್ಟಾಂಗ ನಮಸ್ಕಾರದ ಮಹತ್ವವನ್ನು, ಸಾಲಿಗ್ರಾಮದ ಪೂಜೆಯ ಮಹಿಮೆಯನ್ನು, ಗೋಪೀಚಂದನ ಧಾರಣೆಯ ಅವಶ್ಯಕತೆಯನ್ನು, ವ್ರತಶ್ರೇಷ್ಟವಾದ ಏಕಾದಶೀವ್ರತದ ಮಹತ್ವವನ್ನೂ ನಿರುಪಿಸಿದ್ದಾರೆ. ಏಕಾದಶೀ ಎಂದು ಮಾಡಬೇಕು, ಯಾಕೆ ಮಾಡಬೇಕು, ಎಂಬುದನ್ನು ಹೇಳಿರುವುದಲ್ಲದೆ, ಮಾಡದಿದ್ದರೆ ಆಗುವ ಹಾನಿಯನ್ನು ದಶಮಿ ವೇದವಿಚಾರವನ್ನು, ಉಪವಾಸದ್ವಯಗಳ ಕಾಲವನ್ನು, ಏಕಾದಶಿಗಳಲ್ಲಿ ಕೃಷ್ಣ, ಶುಕ್ಲವೆಂಬ ಭೇದವಿಲ್ಲವೆಂಬುದನ್ನು ದೃಷ್ಟಾಂತಪೂರ್ವಕವಾಗಿ ತಿಳಿಸಿದ್ದಾರೆ. ಶ್ರೀಹರಿಯ ಸರ್ವೋತ್ತಮತ್ವ ಜ್ಞಾನವೇ ಸಕಲ ಪಾಪದು:ಖಗಳಿಗೆ ನಿವಾರಕವಾದ್ದರಿಂದ ಅಂತಹ ಜ್ಞಾನವನ್ನು ಅವಶ್ಯಕವಾಗಿ ಸಕಲ ಸಜ್ಜನರೂ ಪಡೆಯಬೇಕೆಂದು ಉಪಸಂಹರಿಸಿದ್ದಾರೆ.

೩೨. **ತಂತ್ರಸಾರಂ ಚಕಾರಾಸೌ** – ಶ್ರೀಹರಿಯ ಪೂಜೆಗೆ ಕೈಪಿಡಿಯಂತಿರುವ ಗ್ರಂಥವೇ "ತಂತ್ರಸಾರ". ಇದು ಬ್ರಹ್ಮದೇವರಿಗೂ ಶ್ರೀನಾರಾಯಣನಿಗೂ ನಡೆದ ಸಂವಾದರೂಪವಾಗಿದೆ.

- ಈ ಗ್ರಂಥದಲ್ಲಿ ಮೊದಲು **"ಓಂಕಾರ"**ವು ವ್ಯಕ್ತವಾಯಿತೆಂದು ತಿಳಿಸಿ, ಈ **ಓಂಕಾರ**ದಲ್ಲಿ **ಅ, ಉ, ಮ, ನಾದ, ಬಿಂದು, ಘೋಷ, ಶಾಂತ, ಅತಿಶಾಂತ** ಎಂಬ ಎಂಟು ಭಾಗಗಳಿದ್ದು, ಅದರಲ್ಲಿ ವಿಶ್ವಾದಿ ಎಂಟು ಭಗವದ್ರೂಪಗಳನ್ನು ತಿಳಿಸಿದ್ದಾರೆ. ಇಂತಹ ಓಂಕಾರದಿಂದ ನಾರಾಯಣಾಷ್ಟಾಕ್ಷರ ಮಂತ್ರ, ವ್ಯಾಹೃತಿಮಂತ್ರ, ವಾಸುದೇವ ದ್ವಾದಶಾಕ್ಷರ ಮಂತ್ರ, ಚತುರ್ವಿಂಶತ್ಯಕ್ಷರ ಬ್ರಹ್ಮಗಾಯತ್ರೀ ಮಂತ್ರ, ಏಕಪಂಚಾಶತ್ ಮಾತೃಕಾಮಂತ್ರ, ವರ್ಗತ್ರಯಾತ್ಮಕವಾದ ಪುರುಷಸೂಕ್ತವು ಮತ್ತು ಷಡಕ್ಷರ ವಿಷ್ಣುಮಂತ್ರಗಳು ಕ್ರಮವಾಗಿ ವ್ಯಕ್ತವಾಗಿದೆ, ಮತ್ತು ತದಭಿಮಾನಿಗಳಾದ ದೇವತೆಗಳ ಅಭಿವ್ಯಕ್ತಿಯು ಆಯಿತು ಎಂದು ತಿಳಿಸಿದ್ದಾರೆ. ಇವುಗಳೇ ಮೂಲಮಂತ್ರಗಳು.
- ಶ್ರೀಹರಿಯ ಪೂಜೆಗೆ ಅತ್ಯವಶ್ಯಕವಾದ ಪೀಠದೇವತೆಗಳನ್ನು ಹಾಗೂ ಆವರಣದೇವತೆಗಳನ್ನು ತಿಳಿಸಿದ್ದಾರೆ. ಕಲಶಪೂಜಾಕಾಲದಲ್ಲಿ ಅನುಸಂಧಾನ ಮಾಡಬೇಕಾದ ಮಾತೃಕಾದಿ ದೇವತೆಗಳನ್ನು ತಿಳಿಸಿದ್ದಾರೆ.
- ಶ್ರೀಹರಿಯ ಪ್ರತಿಮೆಯ ಮಾಡುವ ಕ್ರಮ, ಅಳತೆ, ಶೀಲಾದಿಗಳನ್ನು ತರುವ ಕ್ರಮ, ಮಂದಿರಗಳನ್ನು ಗೋಪುರಗಳನ್ನು ನಿರ್ಮಾಣ ಮಾಡುವ ಕ್ರಮಗಳನ್ನು ತಿಳಿಸಿ, ಆ ಪ್ರತಿಮೆಗಳಲ್ಲಿ ದೇವತೆಗಳನ್ನು

ಪ್ರತಿಷ್ಠಾಪಿಸುವ ವಿಧಾನವನ್ನು ನಿರೂಪಿಸಿದ್ದಾರೆ. ತತ್ತ್ವನ್ಯಾಸ, ಮಾತೃಕಾನ್ಯಾಸಕ್ರಮಗಳನ್ನು, ಇತರ ದೇವತೆಗಳ ಪೂಜಾ ಕಾಲದಲ್ಲಿ ಅನುಸಂಧಾನ ಪ್ರಕಾರವನ್ನೂ ಸವಿಸ್ತಾರವಾಗಿ ನಿರುಪಿಸಿದ್ದಾರೆ.

- ಹಂಸಮಂತ್ರ, ವರಾಹ, ನರಸಿಂಹ, ಶ್ರೀಕರ, ಭಾರ್ಗವ, ರಾಮ, ದಧಿವಾಮನ, ಕೃಷ್ಣ, ವೇದವ್ಯಾಸ, ಕಪಿಲ, ದತ್ತ, ಧನ್ವಂತರಿ ಇತ್ಯಾದಿ ಎಪ್ಪತ್ತೆರಡು ಮಹಾಮಂತ್ರಗಳನ್ನು ಉದ್ಧರಿಸಿ, ಅವುಗಳಿಗೆ ನ್ಯಾಸಕ್ರಮ, ಛಂದಸ್ಸು, ಋಷಿ, ಧ್ಯಾನಶ್ಲೋಕಗಳನ್ನು ಮತ್ತು ಅವುಗಳಿಂದ ಪ್ರತಿಪಾದ್ಯರಾದ ದೇವತೆ(ಭಗವದ್ರೂಪ)ಗಳ ವಿಚಾರವನ್ನು ಸವಿಸ್ತಾರವಾಗಿ ನಿರೂಪಿಸಿದ್ದಾರೆ. ಅಪರೋಕ್ಷ ಜ್ಞಾನಕ್ಕೆ ಸಾಧನವಾದ ಉಪಾಸನಾಕ್ರಮವನ್ನು, ಸತತ ಶಾಸ್ತ್ರವಿಮರ್ಶಾಕ್ರಮವನ್ನು, ಗುರುಗಳ ವಿಚಾರವನ್ನು, ವ್ಯಾಖ್ಯಾನಾದಿ ಸಾಧನೆಗಳ ಮಹತ್ವವನ್ನು ನಿರೂಪಿಸಿ ಉಪಸಂಹರಿಸಿದ್ದಾರೆ.

## ೩೩. ಸದಾಚಾರಸ್ಮೃತಿಂ ಸುಧೀಃ

**ಪ್ರಾತಃ ಪ್ರಭೃತಿ ಸಾಯಾಂತಂ ಸಾಯಾದಿ ಪ್ರಾತರಂ ತಥಾ ।**
**ಯತ್ಕರೋಮಿ ಜಗನ್ನಾಥ ತದಸ್ತು ತವ ಪೂಜನಮ್ ।**

ಎಂಬ ಉಕ್ತಿಯನ್ನು ಅನುಸರಿಸಿ ಅನುಷ್ಠಾನ ಮಾಡಬೇಕಾದ ಕ್ರಮವನ್ನು ತಿಳಿಸುವುದು.

- ಈ ಗ್ರಂಥವು ಇಲ್ಲಿ ಬ್ರಾಹ್ಮೀಮುಹೂರ್ತದಲ್ಲಿ (ಪ್ರಾತಃಕಾಲ ೪.೩೦ ಘಂಟೆಗೆ) ಎದ್ದು, ಮುಖಪ್ರಕ್ಷಾಲನಾದಿ ಬಹಿರ್ಶುಚಿಯಾಗುವ ಕ್ರಮ, ದಂತಧಾವನಕ್ರಮ, "ಸಿಂಚನ್ ಪುರುಷಸೂಕ್ತೇನ ಸ್ವದೇಹಸ್ಥಂ ಹರಿಂ ಸ್ಮರನ್" ಎಂಬ ಪ್ರಮಾಣಕ್ಕೆ ಅನುಸರಿಸಿ, ಸ್ನಾನವನ್ನು ಮಾಡುವ ಕಾಲದಲ್ಲಿ ಅನುಸಂಧಾನ ಕ್ರಮವನ್ನು ತಿಳಿಸಿದ್ದಾರೆ.
- ಸ್ನಾನಾನಂತರ ಪ್ರಾತಃಕಾಲದಲ್ಲಿ ಸಂಧ್ಯಾವಂದನೆಯ ವಿಧಾನವನ್ನು, ಮಾರ್ಜನ, ಪುನರ್ ಮಾರ್ಜನ ಕ್ರಮವನ್ನು, ಗಾಯತ್ರೀಮಂತ್ರದ ಧ್ಯಾನದ ಕ್ರಮವನ್ನು, ಉಪಸಂಹಾರದ ಮಾರ್ಗವನ್ನು ನಿರೂಪಿಸಿ, ದೇವರ ಪೂಜಾಕ್ರಮವನ್ನು ನಿರೂಪಿಸಿದ್ದಾರೆ.
- ವೈಶ್ವದೇವ, ಬಲಿಹರಣಗಳನ್ನು ತಿಳಿಸಿ, ಭೋಜನ ಮಾಡುವ ಕಾಲದಲ್ಲಿ ಅನುಸಂಧಾನಮಾರ್ಗವನ್ನು, ಸಾಯಂಕಾಲ ಪರ್ಯಂತರವಾಗಿ ಶಾಸ್ತ್ರಾದಿಗಳ ವಿಚಾರಗೈಯುತ್ತಾ, ಕಾಲ ಕಳೆದು ಪುನಃ ಸಾಯಂಕಾಲದ ಸಂಧ್ಯಾವಂದನೆಯ ವಿಧಾನವನ್ನು ಸವಿಸ್ತಾರವಾಗಿ ನಿರೂಪಿಸಿ, ರಾತ್ರಿಯ ಭೋಜನದ ಸಮಯಾದಿ ಕ್ರಮವನ್ನು ನಿರೂಪಿಸಿ, "ಯಾಮಾತ್ ಉಪರಿ ಸ್ವಪೇತ್" – ರಾತ್ರಿ ಒಂದು ಯಾಮದ ನಂತರವೇ (೯.೩೦ ಘಂಟೆಯ ನಂತರ) ಶಯನ ಮಾಡುವ ಕ್ರಮವನ್ನು ತಿಳಿಸಿದ್ದಾರೆ.

- ಈ ಎಲ್ಲಾ ಕಾರ್ಯಗಳನ್ನು ಮಾಡುವ ಕಾಲದಲ್ಲಿ ಶ್ರೀಹರಿಯ ಸರ್ವೋತ್ತಮತ್ವ ಜ್ಞಾನವಿದ್ದರೆ ಇವುಗಳು ಸಾರ್ಥಕವಾಗುತ್ತವೆ ಎಂದು ಸಪ್ರಮಾಣವಾಗಿ ಉದಾಹರಿಸಿ ಉಪಸಂಹಾರ ಮಾಡಿದ್ದಾರೆ.

## ೩೪. **ಶ್ರೀಮದ್ಭಾಗವತಸ್ಯಾಪಿ ತಾತ್ಪರ್ಯಂ ಜ್ಞಾನಸಾಧನಮ್** –

ಶ್ರೀ ಮಧ್ವರು ಶ್ರೀಮದ್ಭಾಗ್ವತ ಗ್ರಂಥಕ್ಕೆ ವಿಲಕ್ಷಣವಾದ ರೀತಿಯಲ್ಲಿ ಅನ್ಯಥಾ ಜ್ಞಾನ ಬರುವ ಸಂದರ್ಭದಲ್ಲಿ, ಅರ್ಥವಾಗದ ಸಂದರ್ಭದಲ್ಲಿ, ಬೇರೆ ಗ್ರಂಥಗಳಿಂದ ವಿರೋಧ ಬರುವ ಸಂದರ್ಭದಲ್ಲಿ ಪ್ರಮಾಣಪೂರ್ವಕವಾಗಿ ವ್ಯಾಖ್ಯಾನ ಮಾಡಿದ್ದಾರೆ.

**ಸಮಾಧೌ ಅಸಮಾಧೌ ವಾ ನಿಸ್ವತಂತ್ರಸ್ಯ ದೇಹಿನ: ।**

**ಸ್ವತಂತ್ರೋऽನ್ಯೋ ನಿಯಂತಾ ವಾಸುದೇವ ಉದಾಹೃತ: ॥**

ಎಂಬುದಾಗಿ ದ್ವಿತೀಯ ಸ್ಕಂಧದಲ್ಲಿ **"ಲಿಂಗತ"** ಎನ್ನುವ ಪದಕ್ಕೆ ವ್ಯಾಖ್ಯಾನ ಮಾಡುವ ಸಂದರ್ಭದಲ್ಲಿ ಶ್ರೀಹರಿಯನ್ನು ಸಕಲರೂ ಅಂಗೀಕರಿಸಬೇಕು – ಈ ರೀತಿಯಾಗಿ ಪ್ರತಿಪಾದಿಸಿದ್ದಾರೆ. **"ಅಧೀತವಾನ್ ದ್ವಾಪರಾದೌ ಪಿತೃದ್ವೈಪಾಯನಾದಹಮ್"** ಎಂಬಲ್ಲಿ **"ದ್ವಾಪರಾದೌ"** ಎಂಬ ಶಬ್ದಕ್ಕೆ ವಿಲಕ್ಷಣ ರೀತಿಯಲ್ಲಿ ಅರ್ಥಗಳನ್ನು ಕೊಟ್ಟು ಸಂಶಯವನ್ನು ಪರಿಹರಿಸಿದ್ದಾರೆ. ಮಹಾಭಾರತ ಗ್ರಂಥದಿಂದ ವಿರೋಧ ಪ್ರಾಪ್ತವಾದರೆ, ಅದನ್ನು ಪರಿಹರಿಸುವ ಕ್ರಮ ಅತಿ ಚಮತ್ಕಾರವಾಗಿ ತೋರಿಸಿದ್ದಾರೆ. ಕಪಿಲಗೀತೆಯಲ್ಲಿ **"ತಪಂತಿ ವಿವಿಧಾನ್ ತಾಪಾನ್ ಐಕಾತ್ಮ್ಯಗಳಚೇತಸ:"** ಎಂಬಲ್ಲಿ **"ಐಕಾತ್ಮ್ಯಗತಚೇತಸ:"** ಎಂಬ ಶಬ್ದದಿಂದ ಅದ್ವೈತವು ಸ್ಪಷ್ಟವಾಗಿ ಭೋಧಿತವಾಗಿದೆ ಎಂದು ವಾದಿಸಲು **"ಏಕ"** ಶಬ್ದಕ್ಕೆ ಪ್ರಧಾನವೆಂದು ಅರ್ಥ ಮಾಡಿ ಶ್ರೀಹರಿಯೇ ಸರ್ವೋತ್ತಮ ಎಂದು ತಿಳಿದು ನಾನಾ ಪ್ರಕಾರವಾದ ತಪಸ್ಸುಗಳನ್ನು ಮಾಡುವವರು ಸಜ್ಜನರೆಂದು ಪ್ರತಿಪಾದಿಸಿದ್ದಾರೆ.

ದಕ್ಷಪ್ರಜಾಪತಿಯ ಯಜ್ಞ ಸಂದರ್ಭದಲ್ಲಿ ಪರಸ್ಪರವಾದ ಸಜ್ಜನರಿಂದ ಬರುವ ಶಾಪಗಳ ವ್ಯಾಪ್ತಿಯನ್ನು ತಿಳಿಸಿ, **"ಅನಿಯಮ: ಸರ್ವೇಶಾಮವಿರೋಧಾತ್ ಶಬ್ದಾನುಮಾನಾಭ್ಯಾತ್"** ಎಂಬ ಸೂತ್ರದಲ್ಲಿ ಅಪರೋಕ್ಷ ಜ್ಞಾನಿಗಳಿಗೆ ಮೋಕ್ಷವು ನಿಯತ ಎಂಬುದನ್ನು ನಿರೂಪಿಸಿದ್ದಾರೆ.

ಅಜಾಮಿಳನ ಉಪಾಖ್ಯಾನದಲ್ಲಿ ಕೇವಲ ನಾಮಸ್ಮರಣೆ ಮಾತ್ರದಿಂದ ಮೋಕ್ಷವೇ ಎಂಬ ಪ್ರಶ್ನೆಗೆ ಸಪ್ರಮಾಣವಾಗಿ ಉತ್ತರಿಸಿದ್ದಾರೆ. ಕಥೆಗಳು (ಜರಾಸಂಧನ ವಧೆ) ಹಿಂದು ಮುಂದಾಗಿ ಗ್ರಂಥಗಳಲ್ಲಿ

ನಿರೂಪಿತವಾದಾಗ ಅವುಗಳ ವಿರೋಧ – ಪರಿಹಾರಕ್ರಮಗಳನ್ನು ಪುರಾಣಾಂತರ ವಾಕ್ಯಗಳಿಂದ ತಿಳಿಸಿಕೊಟ್ಟಿದ್ದಾರೆ. ಉದ್ಧವನಿಗೆ ಉಪದೇಶಿಸುವ ಸಂದರ್ಭದಲ್ಲಿ **"ತ್ವನ್ನು ಭಾಗವತೇಷ್ವಹಮ್"** ಎಂಬ ಸಂದರ್ಭದಲ್ಲಿ, ಬಲರಾಮ ವ್ಯತಿರಿಕ್ತರಾದ ಯುದುಗಳಲ್ಲಿ ನಿನ್ನಲ್ಲಿ ಒಂದು ವಿಭೂತಿರೂಪ ಎಂದು ಚಮತ್ಕಾರವಾಗಿ ವ್ಯಾಖ್ಯಾನಿಸಿದ್ದಾರೆ. **"ಸರ್ವೇ ವಿಮೋಹಿತ ಧಿಯ:"** ಎಂಬಲ್ಲಿ ಅತಿ ವಿಸ್ತಾರವಾದಂತಹ, ಸಪ್ರಮಾಣವಾದ ರೀತಿಯಲ್ಲಿ ಬ್ರಹ್ಮವಾಯುಗಳ ಮೋಹನ ವಿಷಯವನ್ನು ತಿಳಿಸಿದ್ದಾರೆ. ಹೀಗೆ ಅಲ್ಲಲ್ಲಿ ಬರುವ ಸಂಶಯಗಳನ್ನು ನಿವಾರಿಸಿ ಬಹು ಜ್ಞಾನದಾಯಕವಾಗಿ ನಿರೂಪಿಸಿ ಉಪಸಂಹರಿಸಿದ್ದಾರೆ.

## ೩೫. ಮಹಾಭಾರತ ತಾತ್ಪರ್ಯನಿರ್ಣಯಂ ಸಂಶಯುಚ್ಛಿದಮ್ –

ಈ ಗ್ರಂಥವೇ ಶ್ರೀ ಮಧ್ವರಿಂದ ರಚಿತವಾದ ಗ್ರಂಥಗಳಲ್ಲಿ ವಿಸ್ತಾರವಾದ ದೊಡ್ಡ ಗ್ರಂಥವು. ಮೂವತ್ತೆರಡು ಅಧ್ಯಾಯಗಳಿಂದ ಕೂಡಿದ ಈ ಗ್ರಂಥವು ಶ್ರೀ ಮಧ್ವರ ಮೂವತ್ತೆರಡು ಲಕ್ಷಣಗಳನ್ನು ನಿರೂಪಿಸುವ ರೀತಿಯಲ್ಲಿದೆ.

ಮೊದಲು ಸೃಷ್ಟಿಯ ಕ್ರಮವನ್ನು ಶುದ್ಧ ಸೃಷ್ಟಿ, ಮಿಶ್ರ ಸೃಷ್ಟಿ – ಈ ರೀತಿಯಲ್ಲಿ ನಾನಾ ಪ್ರಕಾರವಾದವುಗಳನ್ನು ನಿರೂಪಿಸಿ, ಸಕಲ ಸಚ್ಛಾಸ್ತ್ರಗಳಿಂದ ಪ್ರತಿಪಾದಿತವಾದ ವಿಷಯಗಳನ್ನು ಮುಮುಕ್ಷುವಾದವನು ಅವಶ್ಯಕವಾಗಿ ತಿಳಿಯಲೇಬೇಕಾದ ವಿಷಯವೆಂದು ನಿರೂಪಿಸಿದ್ದಾರೆ.

**ಪಂಚಭೇದಾಶ್ಚ ವಿಜ್ಞಾಯ ವಿಷ್ಣೋಃಸ್ವಾಭೇದಮೇವ ಚ ।**
**ನಿರ್ದೋಷಿತ್ವಂ ಗುಣೋರೇವುಂ ಜ್ಞಾತ್ವಾ ಮುಕ್ತಿ: ನ ಚಾನ್ಯಥಾ ॥**

ಎಂದು ಘಂಟಾಘೋಷವಾಗಿ ತಿಳಿಸಿದ್ದಾರೆ. ಭಾರತ ವಾಕ್ಯಗಳಿಂದಲೇ ಶ್ರೀಹರಿಯ ಸರ್ವೋತ್ತಮತ್ವ, ವಾಯುದೇವರ ಜೀವೋತ್ತಮತ್ವ, ಪಂಚಭೇದ, ತಾರತಮ್ಯಗಳನ್ನು ಪ್ರತಿಪಾದಿಸಿ, ಮೊದಲಿನ ನಾಲ್ಕರಿಂದ ಒಂಬತ್ತು ಅಧ್ಯಾಯಗಳ ಪರ್ಯತರವಾಗಿ ಶ್ರೀರಾಮದೇವರ ಕಥಾವನ್ನು ನಿರ್ಣಯಿಸಿದ್ದಾರೆ. ಹತ್ತನೇ ಅಧ್ಯಾಯದಲ್ಲಿ ಶ್ರೀ ವೇದವ್ಯಾಸರ ಅವತಾರದ ಕಥೆಗಳನ್ನು ನಿರ್ಣಯಿಸಿ, ಮುಂದಿನ ಅಧ್ಯಾಯಗಳಿಂದ ಮಹಾಭಾರತದ ಕಥೆಗಳನ್ನು ಒಂದೊಂದೇ ಸ್ವೀಕರಿಸಿ ನಿರ್ಣಯಿಸಿದ್ದಾರೆ.

ಭೀಮಸೇನದೇವರೊಬ್ಬರೇ ಶುದ್ಧ ಭಾಗವತದರ್ಮದಲ್ಲಿ ಇರುವವರು, ಸದಾ ಶ್ರೀಹರಿಯ ಸ್ವಾಮಿತ್ವಜ್ಞಾನವುಳ್ಳವರೂ, ಶ್ರೀಹರಿಗೆ ಎಂದೂ ವಿರುದ್ಧ ಮಾಡುವವರಲ್ಲವೆಂದು ನಿರೂಪಿಸಲು ಬಾಕಿ

ಎಲ್ಲಾ ಜೀವರುಗಳು ದೋಷಯುಕ್ತರು ಎಂದು **"ಅವಮೇನೇ ಅರ್ಜುನೋऽಪಿ ವಿಪ್ರಸ್ಯ ಶಿಶುರಕ್ಷಣೇ"** ಇತ್ಯಾದಿ ವಾಕ್ಯಗಳಿಂದ ಸ್ಥಾಪಿಸಿದ್ದಾರೆ. ಇಲ್ಲಿ ಪ್ರಾದುರ್ಭೂತರಾದವರುಗಳ ಅಂಶಾಂಶಿ ನಿರ್ಣಯ ಸಂದರ್ಭದಲ್ಲಿ ಪ್ರಾಸಂಗಿಕವಾಗಿ ಸಕಲ ದೇವತೆಗಳ ಯೋಗ್ಯತೆಗಳನ್ನು ನಿರ್ಣಯಿಸಿದ್ದಾರೆ. ಶ್ರೀ ಕೃಷ್ಣ ಪರಮಾತ್ಮನ ಬಾಲ್ಯದಿಂದ ಆರಂಭಿಸಿ ಪರಂಧಾಮವನ್ನು ಕುರಿತು ಹೊರಡುವ ಪರ್ಯಂತರವಾಗಿ, ಅವನ ವ್ಯಾಪಾರಗಳು ಎಷ್ಟು ವಿಲಕ್ಷಣ ಎಂದೂ ಹಾಗು ಪ್ರತಿಯೊಂದು ವ್ಯಾಪಾರವು ಸಹ ಸರ್ವೋತ್ತಮತ್ವ ಸಾಧಕವೆಂದು ಸ್ಥಾಪಿಸಿ, **"ಕೃಷ್ಣಾವತಾರೇ ಸರ್ವೋತ್ತಮತ್ವ ನಿರ್ಣಯ:"** ಎಂಬ ಉಕ್ತಿಯನ್ನು ಸಾಧಿಸಿದ್ದಾರೆ.

ಶ್ರೀ ರಾಮಕೃಷ್ಣಾದಿಗಳಲ್ಲಿ ಜೀವರು ಅವರವರ ಯೋಗ್ಯತೆಯನ್ನು ಅನುಸರಿಸಿ ಸಾಧನ ಮಾಡಬೇಕು. ಹೆಚ್ಚಾಗಿದ್ದರೆ, ಅಥವಾ ಕಡಿಮೆಯಾದರೆ ಏನು ಪರಿಣಾಮವೆಂಬ ವಿಷಯವನ್ನು ಕರ್ಣ–ಸುಗ್ರೀವ, ಅರ್ಜುನಾದಿಗಳ ಕಥಾವಿಶೇಷಗಳಿಂದ ನಿರ್ಣಯಿಸಿದ್ದಾರೆ. ಧರ್ಮಾಧರ್ಮಗಳ ನಿರ್ಣಯ, ಕಲಿಯುಗಾದಿ ಕಾಲದಲ್ಲಿ ಅನುಸರಿಸಬೇಕಾದ ಕ್ರಮಗಳನ್ನು ಸವಿಸ್ತಾರವಾಗಿ ನಿರೂಪಿಸಿ, ಈ ಗ್ರಂಥವನ್ನು ಶ್ರೀ ವೇದವ್ಯಾಸರ ಅನುಗ್ರಹದಿಂದಲೇ, ಆಜ್ಞೆಯಿಂದಲೇ ಬರೆದಿರುವುದು ಎಂದು ಹೇಳಿ ಶ್ರೀ ಹರಿಯನ್ನು ಸ್ತೋತ್ರ ಮಾಡುತ್ತಾ ಉಪಸಂಹರಿಸಿದ್ದಾರೆ.

## ೩೬. ಯತಿಪ್ರಣವಕಲ್ಪಂ ಚ ಪ್ರಣವಾರ್ಥಪ್ರಕಾಶಕಮ್ –

ಸಾಧನೆ ಮಾಡುವ ಜೀವ, ತನ್ನ ಜನ್ಮವನ್ನು ಸಾರ್ಥಕಗೊಳಿಸಲು ಯತ್ಯಾಶ್ರಮವನ್ನು ಸ್ವೀಕರಿಸಿ, ಶ್ರಿಹರಿಯ ಸೇವೆ ಮಾಡಲು ಬಯಸಿದರೆ, ಅಂತಹ ಯತಿಗಳು ಯಾವ ರೀತಿ ಸಾಧಿಸಬೇಕು, ಅದರ ನಿಯಮಗಳು, ಉಪಾಸನಾ ಪದ್ಧತಿ, ಓಂಕಾರ (ಪ್ರಣವ) ಮಂತ್ರದ ಅನುಸಂಧಾನ ಕ್ರಮಗಳನ್ನು ಈ ಗ್ರಂಥದಲ್ಲಿ ಶ್ರೀ ಆಚಾರ್ಯರು ವಿಸ್ತರಿಸಿದ್ದಾರೆ. ಓಂಕಾರದ ಅರ್ಥವಾದ ಸರ್ವೋತ್ತಮತ್ವ, ಗುಣಪೂರ್ಣತ್ವ, ಉಪಾಸನೆಯನ್ನೇ ಮಾಡಬೇಕು. ಹರಿಭಕ್ತರಿಗೆ ಅಭಯವನ್ನು ಜ್ಞಾನವನ್ನು ಪ್ರಧಾನ ಮಾಡಿ ಉದ್ಧರಿಸಬೇಕು ಎಂದು ನಿರೂಪಿಸಿದ್ದಾರೆ.

## ೩೭. ಜಯಂತೀ ನಿರ್ಣಯಂ – ಚಕ್ರೇ ದೇವಕೀಗರ್ಭಜನ್ಮನ: –

ಶ್ರೀಕೃಷ್ಣ ಪರಮಾತ್ಮನ ಪ್ರಾದುರ್ಭಾವ ದಿನವಾದ ಶ್ರಾವಣ ಕೃಷ್ಣ ಅಷ್ಟಮಿ ರೋಹಿಣಿ ನಕ್ಷತ್ರಯುಕ್ತವಾಗಿದ್ದರೆ, ಅದು **"ಕೃಷ್ಣಜಯಂತೀ"** ಎಂದು ಅನ್ನಿಸಿಕೊಳ್ಳುತ್ತದೆ. ಈ ವ್ರತವು ಸಕಲ ಪಾಪನಿವಾರಕವೆಂದೂ, ಕಲಿಯುಗದಲ್ಲಿ ಬಹಳ ಪುಣ್ಯಪ್ರದವೂ, ಸಕಲ ಭಗವದ್ಭಕ್ತರೂ ಅವಶ್ಯಕವಾಗಿ ಜನ್ಮಪರ್ಯಂಕರವಾಗಿ ಅನುಷ್ಠಾನ ಮಾಡಬೇಕೆಂದೂ ತಿಳಿಸಿದ್ದಾರೆ. ಆ ದಿನ ಉಪವಾಸವಿದ್ದು, ಮಾರನೇಯ ದಿನ ತಿಥಿ ಹಾಗೂ ನಕ್ಷತ್ರಗಳೆರಡೂ ಕಳೆದ ಮೇಲೆ ಪಾರಣೆ ಮಾಡಬೇಕೆಂದು **"ಯೋ ಭುಂಕ್ತೇ ತದ್ದಿನೇ ಮೋಹಾತ್ ಪೂಯಶೋಣಿತಮತ್ತಿಸ:"** ಎಂದು ಉದ್ಗರಿಸಿದ್ದಾರೆ. **"ಧಮಾಯೇತಿ ಚ ಮಂತ್ರೇಣ ತತ: ಪಾರಣಮಾಚರೇತ್"** ಎಂದು ಪಾರಣ ಮಾಡುವ ಪರ್ಯಂತರವಾಗಿ ಉಪಸಂಹರಿಸಿದ್ದಾರೆ.

ಅಂತ್ಯದಲ್ಲಿ ಶ್ರೀಕೃಷ್ಣಸ್ತುತಿಯನ್ನು

**ಅಂಬರಗಂಗಾಚುಂಬಿತಪಾದ: ಪದತರಯಲಿತಗುರುತರಶಕಟ: ।**
**ಕಾಲಿಯನಾಗಸ್ವೇಲನ ಹಂತಾ ಸರಸಿಜನವದಲವಿಕಸಿತನಯನ: ॥**
**ಕಾಲಿಯನಾಗೀಕರ್ಬುರಕಾಯ: ಶರಶತಶಕಲಿತ ಸುರರಿಪು ನಿವಹ: ।**
**ಸಂತತಮಸ್ಮಾನ್ ಪಾತು ಮುರಾರಿ: ಸತತಗ ಜಮಜವ ಖಗಪತಿನಿರತ: ॥**

ಈ ರೀತಿಯಲ್ಲಿ ಉಪಸಂಹಾರ ಮಾಡಿದ್ದಾರೆ. ಈ ರೀತಿಯಲ್ಲಿ ಶ್ರೀಮದಾನಂದತೀರ್ಥರಿಂದ ರಚಿತವಾದ ಗ್ರಂಥಗಳನ್ನು ಸಂಕ್ಷಿಪ್ತ ಪರಿಚಯಿಸಿ, ಈ ಕಾರ್ಯದಿಂದ ನಮ್ಮ ಗುರುಗಳ ಅಂತರ್ಯಾಮಿಯಾದ ಶ್ರೀ ಹಯವದನ ಪ್ರೀತನಾಗಲೆಂದು ಪ್ರಾರ್ಥಿಸುತ್ತೇನೆ.

## "ಶ್ರೀಭಾರತೀರಮಣಮುಖ್ಯಪ್ರಾಣಾಂತರ್ಗತ ಶ್ರೀಕೃಷ್ಣಾರ್ಪಣಾಮಸ್ತು"

**ಮ|ಶಾ।ಸಂ।ದ್ವಾರಕಾನಾಥಾಚಾರ್ಯರು**